ಐಕ್ಯರಂಗ



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 12 ಸಂಚಿಕೆ 27
ಬೆಲೆ ರೂ 1-50 ಜುಲೈ 8 -1990

ಕೋಮುವಾದಿಗಳ ಆಟ ಸಾಗದಂತೆ ಮಾಡೋಣ

ಮತ್ತೆ ಮೋಡ ಕವಿಯಲಾರಂಭಿಸಿದೆ. ಬಿರುಗಾಳಿಯ ಲಕ್ಷಣಗಳು ಕಾಣಬರುತ್ತಿವೆ. ಈ ಬಿರುಗಾಳಿಯ ಕೇಂದ್ರ ಮತ್ತೆ ಅಯೋಧ್ಯೆಯ ರಾಮಜನ್ಮಭೂಮಿ/ಬಾಬ್ರಿ ಮಸೀದಿಯ ಅದೇ ಜಾಗ. ವಿಶ್ವ ಹಿಂದೂ ಪರಿಷತ್ತು ಯುದ್ಧದ ತಮಟೆ ಬಾರಿಸಿದೆ. ಬಿ.ಜೆ.ಪಿ. ಯುದ್ಧದ ಕೂಗಿಗೆ ಧ್ವನಿ ಸೇರಿಸಿದೆ. ಅತ್ತ ಮುಸ್ಲಿಂ ಲೀಗ್ ಒಂದು ದೇಶವನ್ನು ಹೊತ್ತಿಸಿ ಉರಿಸಲು ಬೇಕಾಗುವಷ್ಟು ಸ್ಫೋಟಕ ಸಾಮಗ್ರಿಯನ್ನು ಒದಗಿಸಲು ಸಿದ್ಧವಾಗಿ ನಿಂತಿದೆ.

ಪ್ರಜಾಪ್ರಭುತ್ವದ ಮೇಲೆ ಭಾಷಣ ಬಿಗಿಯುವ, ಪ್ರಜಾಪ್ರಭುತ್ವ ಮೌಲ್ಯಗಳ ಬಗ್ಗೆ ಅಣಿಮುತ್ತುಗಳನ್ನು ಸುರಿಸುವ ಬಿ.ಜೆ.ಪಿ. ಕೋರ್ಟ್ ತೀರ್ಪಿಗೆ ಸೊಪ್ಪು ಹಾಕುವುದಿಲ್ಲ ಎಂದು ವಿ.ಹೆಚ್.ಪಿ. ಕೋಮುವಾದಿ ಅಬ್ಬರದಿಂದ ಘೋಷಿಸಿದಾಗ ಕೋಲೆ ಬಸವನಂತೆ ತಲೆಯಾಡಿಸುತ್ತದೆ. ಇದು ಗೋಸುಂಬೆ ತನದ ಪರಮಾವಧಿಯಲ್ಲದೆ ಮತ್ತಿನ್ನೇನು? ಯಾರಿಗಾಗಿ, ಏತಕ್ಕಾಗಿ ಪ್ರಜಾಪ್ರಭುತ್ವ? ಕೆಲವು ರಾಜ್ಯಗಳಲ್ಲಿ ಆಳುತ್ತಿರುವ ಪಕ್ಷವಾಗಿರುವ ಬಿ.ಜೆ.ಪಿ. ಈ ಪ್ರಶ್ನೆಗಳಿಗೆ ಉತ್ತರ ಕೊಡಲು ಬಾಧ್ಯವಾಗಿದೆ.

ಬಿ.ಜೆ.ಪಿ. ತಾನು ಜಾತ್ಯತೀತತೆ ಎತ್ತಿ ಹಿಡಿಯುತ್ತೇನೆ ಎಂದೂ ಅಬ್ಬರಿಸುತ್ತದೆ. ನಿಜವಾಗಿಯೂ ವಿಚಿತ್ರ ಬ್ರಾಂಡಿನ ಜಾತ್ಯತೀತತೆ ಅದರದು!

ಮಧ್ಯಯುಗದ ನಂತರದ ಜಾತ್ಯತೀತತೆಯ ಇತಿಹಾಸವೆಂದರೆ ಒಂದು ನಿರಂತರ ಹೋರಾಟದ ಇತಿಹಾಸ. ಈ ಹೋರಾಟ ರಾಜಕೀಯವನ್ನು ಧರ್ಮದಿಂದ ಬೇರ್ಪಡಿಸುವ ಹೋರಾಟವಷ್ಟೇ ಅಲ್ಲ. ಪ್ರಭುತ್ವ ನಡೆಸುವ ಕಾರ್ಯದಲ್ಲಿ ಧರ್ಮ ಅತಿಕ್ರಮಣ ನಡೆಸದಂತೆ ನೋಡಿಕೊಂಡ ಹೋರಾಟ ಕೂಡಾ. ಜಾತ್ಯತೀತತೆ ವಿಶ್ವಾದ್ಯಂತ ವಾಸ್ತವಿಕತೆ. ಅರಬ್ ಜಗತ್ತಿನ ಕೆಲವು ಮತೀಯ ಪ್ರಭುತ್ವಗಳಲ್ಲೂ ಹೆಚ್ಚು ಪ್ರಜ್ಞಾವಂತ, ನ್ಯಾಯಪೂರ್ಣ ಸಮಾಜಕ್ಕಾಗಿ ಹಾರೈಸುವ ರಾಜಕೀಯ ಶಕ್ತಿಗಳು ಮೇಲೆದ್ದು ಬರುತ್ತಿವೆ. ಅಧಿಕಾರಕ್ಕಾಗಿ ಸ್ಪರ್ಧೆ ನಡೆಸಿವೆ.

ಪ್ರತಿಯೊಂದು ದೇಶದಲ್ಲಿ ಪ್ರತಿಯೊಂದು ಸಮಾಜದಲ್ಲಿ ಅಲ್ಪ ಸಂಖ್ಯಾತರಿದ್ದಾರೆ. ಅವರು ಜನಾಂಗೀಯ ಅಲ್ಪ ಸಂಖ್ಯಾತರಿರಬಹುದು ಅಥವಾ ಧಾರ್ಮಿಕ ಅಲ್ಪಸಂಖ್ಯಾತರಿರಬಹುದು. ಈ ಎಲ್ಲಾ ದೇಶಗಳಲ್ಲಿ ಅಲ್ಪ ಸಂಖ್ಯಾತರ ಹಿತಾಸಕ್ತಿಗಳ ರಕ್ಷಣೆ ಸರಕಾರದ ಕರ್ತವ್ಯ ಮಾತ್ರವಲ್ಲ, ಬಹುಸಂಖ್ಯಾತರ ಪವಿತ್ರ ಕರ್ತವ್ಯ ಕೂಡಾ. ಇದು ಪ್ರಜಾಪ್ರಭುತ್ವದ ಲಕ್ಷಣ. ನಾಗರಿಕ ಸಮಾಜಗಳಿಗೆ ಪಾಕಿಸ್ತಾನ ಎಂದೂ ಮಾದರಿಯಾಗಲು ಸಾಧ್ಯವಿಲ್ಲ. ಅಲ್ಲವೇ? ಬಾಬ್ರಿ ಮಸೀದಿಯನ್ನು ನಾಶಪಡಿಸುತ್ತೇವೆ. ಅಥವಾ ಅದನ್ನು ಅಲ್ಲಿಂದ ಎತ್ತಿ ಹಾಕಿ ದೇವಸ್ಥಾನ ಕಟ್ಟುತ್ತೇವೆ ಎನ್ನುವ ಪ್ರತಿಜ್ಞೆ ಈಗಾಗಲೇ ಗಂಭೀರಗೊಂಡಿರುವ ಕೋಮು ಸನ್ನಿವೇಶದ ಬೆಂಕಿಗೆ ತುಪ್ಪ ಹಾಕುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಅಕ್ಟೋಬರ್ 30 ರಂದು ದೇವಸ್ಥಾನದ ನಿರ್ಮಾಣದ ಪೂರ್ವಸಿದ್ಧತೆಯಾಗಿ ಪ್ರತಿಯೊಂದು ಹಳ್ಳಿಯಿಂದ ಸ್ವಯಂ ಸೇವಕರನ್ನು ಸೆಳೆಯುವ ವಿವರವಾದ ಯೋಜನೆ ಈಗಾಗಲೇ ಹಲವಾರು ನಗರ ಪಟ್ಟಣಗಳಲ್ಲಿ ಅನುಭವಕ್ಕೆ ಬರುತ್ತಿರುವ ಕೋಮುವಾದಿ ಗದ್ದಲಗಳಿಗೆ ಇನ್ನಷ್ಟು ಶಕ್ತಿ ತುಂಬಿ ಭಯಾನಕಗೊಳಿಸುತ್ತದೆಯಷ್ಟೆ.

ಇದು ಬಿ.ಜೆ.ಪಿ.ಯ ಜಾತ್ಯತೀತತೆ! ಹಾಸ್ಯಾಸ್ಪದ ಸಂಗತಿ ನಿಜ. ಆದರೆ ನಗಬಹುದಾದ ಸಂಗತಿಯಲ್ಲ. ಗಂಭೀರ ಚಿಂತೆಯ ಸಂಗತಿ.

ದ್ವಾರಕಾಪೀಠದ ಶಂಕರಾಚಾರ್ಯರ ವಿಷಯದಲ್ಲಿ ಉತ್ತರ ಪ್ರದೇಶ ಸರ್ಕಾರದ ದೃಢ ಕ್ರಮ ಹಿಂದೂಗಳ ನಡುವೆ ಸಿಟ್ಟನ್ನೇನೂ ಹುಟ್ಟಿಸಲಿಲ್ಲ. ಅಂದರೆ ರಾಜಕೀಯ ಇಚ್ಛೆ ಇದ್ದಲ್ಲಿ ಕೋಮುವಾದದ ಸಲಗವನ್ನು ಮುಖಾಮುಖಿಯಾಗಿ ಎದುರಿಸುವುದು ಸಾಧ್ಯ ಎಂಬುದನ್ನು ಇದು ತೋರಿಸಿ ಕೊಟ್ಟಿದೆ. ಮುಸ್ಲಿಮ್ ಮೂಲಭೂತವಾದಿಗಳೂ ತಿಕ್ಕಾಟ ಹಾದಿಯ ಅಪಾಯವನ್ನು ಮನಗಂಡಿದ್ದರಿಂದ ಸರಕಾರಕ್ಕೆ ಈ ಕ್ರಮ ಕೈಗೊಳ್ಳಲು ಸುಲಭವಾಯಿತು.

ಆದರೆ ಈಗ ವಿಶ್ವಹಿಂದೂ ಪರಿಷತ್ತು, ಬಿ.ಜೆ.ಪಿ.ಯ ನೆರವು, ಪ್ರೋತ್ಸಾಹದೊಂದಿಗೆ ಕೋಮುವಾದದ ಬಾವುಟ ಎತ್ತಿರುವಾಗಲೇ ಅತ್ತ ಮುಸ್ಲಿಂ ಲೀಗ್ ದೊಡ್ಡ ಪ್ರಮಾಣದ ಅಲ್ಲೋಲಕಲ್ಲೋಲ . ತರಬಹುದಾದ ಸ್ಫೋಟಕ ಸಂಗತಿಗಳನ್ನು ಒದಗಿಸುತ್ತದೆ. ಅದರ ಕೆಲವು ಬೇಡಿಕೆಗಳಂತೂ ಮಧ್ಯ ಯುಗದ ಮತಾಂಧತೆಯಿಂದ ಕೂಡಿದ ದುಷ್ಟ ಕೋಮುವಾದಿ ಸ್ವರೂಪದವು.


ನಿಜವೆಂದರೆ, ಹಿಂದೂ ಮತ್ತು ಮುಸ್ಲಿಂ ಕೋಮುವಾದ ಅವಳಿ-ಜವಳಿಗಳು. ಹಿಂದೂ ಕೋಮುವಾದಿಗಳು ಘರ್ಜಿಸುವಾಗ ಮುಸ್ಲಿಂ ಮೂಲಭೂತವಾದಿಗಳು ಗುಡುಗುತ್ತಾರೆ. ಇಬ್ಬರೂ ತಮ್ಮ ಘರ್ಜನೆ ಗುಡುಗುಗಳನ್ನು ಸಾಮಾನ್ಯ ಜನರಲ್ಲಿ ಭಾವೋದ್ರೇಕ ಕೆರಳಿಸುವ ತಮ್ಮ ಧಾಂಧಲೆಗಳಿಗಾಗಿ

ಪುಟ 8 ಕ್ಕೆ

ಹೆಚ್ಚುತ್ತಿರುವ ಜಾತಿ ಅತ್ಯಾಚಾರಗಳ ಬಗ್ಗೆ ಪಿ.ಬಿ. ಆತಂಕ

[illegible]

ಒಳ ಪುಟಗಳಲ್ಲಿ



ಮಹಾನ್ ಕವಿ, ದೇಶಪ್ರೇಮಿ ಹರೀಂದ್ರನಾಥ ಚಟ್ಟೋಪಾಧ್ಯಾಯ

ಪ್ರಖ್ಯಾತ ಕವಿ, ನಟ, ಹಾಡುಗಾರ, ಲೇಖಕ ಮತ್ತು ರಾಜಕೀಯ ತೀವ್ರಗಾಮಿ ಡಾ. ಹರೀಂದ್ರನಾಥ ಚಟ್ಟೋಪಾಧ್ಯಾಯ ಇನ್ನು ನಮ್ಮೊಡನಿಲ್ಲ. ಜೂನ್ 23 ರಂದು ತಮ್ಮ 93 ನೇ ವಯಸ್ಸಿನಲ್ಲಿ ಮುಂಬೈಯಲ್ಲಿ ಅವರು ಕೊನೆಯುಸಿರೆಳೆದರು.

ಹೈದರಾಬಾದಿನಲ್ಲಿ ಹುಟ್ಟಿ ಬೆಳೆದು ಹದ ವೀಧರರಾದವರು ಹರೀಂದ್ರ ಡಾ.ಸರೋಜಿನಿ ನಾಯ್ಡು, ಡಾ.ಜಯಸೂರ್ಯ, ಡಾ. ಹರೀಂದ್ರನಾಥ ಚಟ್ಟೋಪಾಧ್ಯಾಯ ಮತ್ತಿತರ ಕೆಲವು ಕ್ರಾಂತಿಕಾರಿಚಿಂತಕರು. ವಿಖ್ಯಾತ ಸಮಾಜ ಸೇವಕರು ಸ್ವಾತಂತ್ರ್ಯ ಹೋರಾಟದಲ್ಲಿ. ನಮ್ಮ ಉಪಖಂಡದ ಸ್ವಾತಂತ್ರ್ಯ ನಂತರ ನಮ್ಮ ದೇಶದ ಎಲ್ಲಾ ಪ್ರಗತಿಪರ ಚಳುವಳಿಗಳಲ್ಲಿ ತಮ್ಮದೆಲ್ಲವನ್ನೂ ಅರ್ಪಿಸಿ ಚಾರಿತ್ರಿಕ ಪಾತ್ರವಹಿಸಿದವರು.

1946-51ರ ಅವಧಿಯಲ್ಲಿ ಮೊದಲು ನಿಜಾಮನ ಆಳ್ವಿಕೆಯ ವಿರುದ್ಧ ನಡೆದ ಐತಿಹಾಸಿಕ ತೆಲಂಗಾಣಾ ರೈತ ಹೋರಾಟಗಾರರ ಶೌರ್ಯ-ಸಾಹಸಗಳನ್ನು, ತ್ಯಾಗ-ಬಲಿದಾನಗಳನ್ನು ಹಾಡಿದ, 33 ಮುದ್ರಿತ ಪುಟಗಳಷ್ಟು ದೊಡ್ಡದಾದ ಒಂದು ಕವನ ಬರೆದ, ಏಕೈಕ ಕವಿ ಹರೀಂದ್ರನಾಥ ಚಟ್ಟೋಪಾಧ್ಯಾಯ.

ಪ್ರಜಾಪ್ರಭುತ್ವ ಆಂದೋಲನಕ್ಕೆ ಅವರ ಈ ಕಾಣಿಕೆಗೆ ಮಾನ್ಯತೆ ನೀಡಿದ ಆಂಧ್ರ ಪ್ರದೇಶದ ಕಮ್ಯುನಿಸ್ಟ್ ಆಂದೋಲನ ಅವರನ್ನು ವಿಜಯವಾಡಾದಿಂದ ಲೋಕಸಭೆಗೆ ಪಕ್ಷೇತರ ಅಭ್ಯರ್ಥಿಯಾಗಿ ನಿಲ್ಲಿಸಿತು. ಹರೀಂದ್ರನಾಥ ಚಟ್ಟೋಪಾಧ್ಯಾಯ ಭಾರೀ ಬಹುಮತದಿಂದ ಗೆದ್ದರು. ಮೊದಲ ಲೋಕಸಭೆಯಲ್ಲಿ ಕಮ್ಯುನಿಸ್ಟರು ಮತ್ತು ಅದರ ಬೆಂಬಲಿಗರು ಅತೀ ದೊಡ್ಡ ವಿರೋಧ ಗುಂಪಾಗಿ ಮೂಡಿಬಂದರು. ಆಗ ಪಕ್ಷದ ಕೇಂದ್ರ ಸಮಿತಿ ಸಂಸತ್ತಿನ ಎರಡೂ ಸದನಗಳಲ್ಲಿ ಕಮ್ಯುನಿಸ್ಟ್ ನೇತೃತ್ವದ ವಿರೋಧ ಪಕ್ಷದ ಗುಂಪಿನ ಉಸ್ತುವಾರಿಯ ಕೆಲಸ ಒಪ್ಪಿಸಿದ್ದ ದಿವಂಗತ ಪಿ. ಸುಂದರಯ್ಯನವರ ಮುಖಂಡತ್ವದಲ್ಲಿ ಹರೀಂದ್ರನಾಥರು ಮತ್ತು ಸರೋಜಿನಿ ನಾಯ್ಡುರವರ ಮಗ ತಮಸೂರ್ಯ ವಿರೋಧ ಪಕ್ಷದೊಂದಿಗೆ ಕೂತರು. ಡಿಸೆಂಬರ್ 1972ರಲ್ಲಿ ಪ್ರಕಟವಾದ ತೆಲಂಗಾಣಾ ಹೋರಾಟ ಕುರಿತ ಪಿ. ಸುಂದರಯ್ಯನವರು ಗ್ರಂಥದಲ್ಲಿ ಈ ಹೋರಾಟ ಕುರಿತಾದ ತನ್ನ ದೀರ್ಘ ಕವನವನ್ನು ಮುದ್ರಿಸಲು ಹರೀಂದ್ರನಾಥರು ಒಪ್ಪಿಗೆ ನೀಡಿದ್ದರು.

ಸಿ.ಪಿ.ಐ.(ಎಂ) ಶ್ರೀಮತಿ ಚಟ್ಟೋಪಾಧ್ಯಾಯ ಮತ್ತು ಅವರ ಇಬ್ಬರು ಮಕ್ಕಳಿಗೆ ತನ್ನ ಹಾರ್ದಿಕ ಸಂತಾಪವನ್ನು ವ್ಯಕ್ತಪಡಿಸುತ್ತದೆ ಎಂದಿರುವ ಪೊಲಿಟ್ ಬ್ಯುರೋ ಕ್ರಾಂತಿಕಾರಿಗಳ, ದೇಶಪ್ರೇಮಿಗಳ ಈ ಕುಟುಂಬಕ್ಕೆ ಕಮುನಿಸ್ಟ್ ಆಂದೋಲನ ಋಣಿಯಾಗಿರುತ್ತದೆ ಎಂದು ತನ್ನ ಶ್ರದ್ಧಾಂಜಲಿ ಅರ್ಪಿಸುತ್ತಾ ಹರೀಂದ್ರನಾಥ ಚಟ್ಟೋಪಾಧ್ಯಾಯ ಮತ್ತು ಅವರ ನೈತಿಕ, ಮಾನವೀಯ ಹೃದಯ ಕಲಕುವ ಸಾಹಿತ್ಯ ಮತ್ತು ಕಲೆ ಚಿರಾಯು ಎಂದಿದೆ.

ಕಾಂ. ಇ.ಎಂ.ಎಸ್. ಪ್ರಶ್ನೋತ್ತರ

ರಾಷ್ಟ್ರೀಯ, ಅಂತರರಾಷ್ಟ್ರೀಯ ಸೈದ್ಧಾಂತಿಕ, ರಾಜಕೀಯ ಪ್ರಶ್ನೆಗಳಿಗೆ ಕಾಂ.ಇ.ಎಂ.ಎಸ್. ಉತ್ತರಿಸಲೊಪ್ಪಿದ್ದಾರೆಂದು ಈಗಾಗಲೇ ಪ್ರಕಟಿಸಿದ್ದೇವೆ. ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಂದಲೇ ಉತ್ತರಗಳನ್ನು ಪಡೆಯಬಹುದಾದ ಈ ಸುವರ್ಣಾವಕಾಶವನ್ನು ಸಂಗಾತಿಗಳು ಸದುಪಯೋಗಪಡಿಸಿಕೊಳ್ಳಬೇಕು. ಕಾಂ. "ಇ.ಎಂ.ಎಸ್. ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಹೊಚಿಮಿನ್ಹ್ ಶತಮಾನೋತ್ಸವ

ವಿಯಟ್ನಾಂ ಕಮೂನಿಸ್ಟ್ ನಾಯಕ ಹಾಗೂ ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಪ್ರವೃತ್ತಕ ಹೊ.ಚಿ.ಮಿನ್ಹ್‌ರವರ ಜನ್ಮ ಶತಮಾನೋತ್ಸವ ಆಚರಣೆಯು ತಾ. 18.6.1990 ರಂದು ಭಾರತ-ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕುಪ್ಪೆಪದವು ಶಾಖೆ ಆಶ್ರಯದಲ್ಲಿ ಕುಪ್ಪೆಪದವಿನಲ್ಲಿ ಜರುಗಿತು.

ಹೊ. ಚಿ ಮಿನ್ಹ್‌ರವರು ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಪ್ರವೃತ್ತಕರಾಗಿದ್ದು ಅದನ್ನು ಎತ್ತಿ ಹಿಡಿದು ಸಮಾಜ ಪರಿವರ್ತನೆಗೆ ಮುನ್ನುಗ್ಗಬೇಕೆಂದು ಗುರುಪುರವಲಯ ಸಿ.ಪಿ.ಐ.(ಎಂ) ಕಾರ್ಯದರ್ಶಿ ಯು.ಬಿ.ಲೋಕಯ್ಯ ನವರು ಕರೆ ನೀಡಿದರು.

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ದ.ಕ. ಜಿಲ್ಲಾ ಸಮಿತಿ ಸಹ ಕಾರ್ಯದರ್ಶಿ ವಸಂತ ಆಚಾರಿಯವರು ಹೊ. ಚಿಮಿನ್ಹ್ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿ ಸಿ.ಪಿ.ಐ.(ಎಂ) ಗುರುಪುರ ಪ್ರದೇಶ ಸಮಿತಿ ಸದಸ್ಯ ವಾಸುದೇವ ಆಚಾರಿಯವರು ಮಾತನಾಡುತ್ತಾ, ಹೊ ಚಿ ಮಿನ್ಹ್‌ರವರು ಹುಟ್ಟಿ 100 ವರುಷಗಳು ಕಳೆದರೂ, ಅವರ ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಬಗೆಗಿನ ಆಸಕ್ತಿ, ಮಾರ್ಕ್ಸ್‌ವಾದ ಲೆನಿನ್‌ವಾದದ ಮೇಲಿನ ಅಪಾರ ಜ್ಞಾನ, ಪ್ರಾಯೋಗಿಕ ಕೆಲಸ ಕಾರ್ಯಗಳು ಇಂದಿಗೂ ಹಾಗೂ ಮುಂದಿಗೂ ಪ್ರಸ್ತುತ ಎನ್ನುತ್ತಾ, ಅವರು, ಅವರ ಚರಿತ್ರೆಯನ್ನು, ಅವರ ಚರಿತ್ರೆಯನ್ನು, ಮಾರ್ಗದರ್ಶನವನ್ನು ಅಳವಡಿಸಿ ನಮ್ಮ ದೇಶದ ಸಾಮಾಜಿಕ ಬದಲಾವಣೆಗೆ ಫಲ ತೊಟ್ಟು, ಹೋರಾಡಬೇಕೆಂದು ನುಡಿದರು.

ಏನಾಗಿದೆ ?

ಏನಾಗಿದೆ ಕಾಶ್ಮೀರಕೆ ?
ಪಂಜಾಬಿಗೆ ಏನು ?
ನರಭಕ್ಷಕ ಹಿಡಿದಿದೆಯೇ ?
ಈ ಚೆಲುವಿನರ್ಥೇನು ?

ಕೊಳದಾಟಿಯ ಹೊಳೆಯಾಟಿಯ
ಮಕಮಲ್ಲಿನ ಹಸಿರು
ಎಲ್ಲಿಯ ಹಗೆ ಎಲ್ಲಿಯ ಹೊಗೆ
ಒಣಗುತಿದೆ ಉಸಿರು

ಬಿಳಿ ಬಿಟ್ಟಿಕೆ ಎಲ್ಲಿಯದೊ
ಈ ರಕ್ತದ ಕಲೆಯು
ಮನೆ ಮನೆಗಳ ಮರೆಯಲ್ಲೂ
ಜಪಿಸುತಿದೆ ಹುಲಿಯು

ನಸುಗೆಂಪಿನ ನರುಗೆಂಪಿನ
ಕಣಿವೆಯ ಹೂದಾರಿ
ಮಧುಚಂದ್ರದ ಪಯಣಿಗರನು
ನಿಲಿಸಿದೆ ಹೌಹಾರಿ

ಪ್ರಕೃತಿಯ ಹೂ ಬಾಡಿಸಿದೆ
ದ್ವೇಷದ ಈ ಬಿಸಿಲು
ಸ್ನೇಹದ ಕೈ ತೊಳೆದೀತೆ
ರಕ್ತದ ಈ ಕೆಸರು

ಗೋಧಿಯ ತೆನೆ ಹಾಲಿನ ಕೆನೆ
ಬಿಡಿಸಿರಲೀ ದ್ವೇಷ
ಅಲೆ ಅಲೆಗಳ ಬೆಳ್ನಕ್ಕಿಯು
ಕಣ್ಣರೆಸಲಿ ರೋಷ

ಕಡೆಗೋಲಿನ ತಾಯಂದಿರೆ
ಕುಡುಗೋಲಿನ ಬಂಧು
ತಡೆಹಿಡಿಯಿರಿ ಸೋದರಿಕೆಗೆ
ಗುರಿಯಿಟ್ಟಿಹ ಗುಂಡು

– ಸು.ರಂ. ಎಕ್ಕುಂಡಿ

ವೀರ ತೆಲಂಗಾಣಾ ಹೋರಾಟದ ಕಿಡಿ ಹೊತ್ತಿತು

44 ವರ್ಷಗಳ ಹಿಂದಿನ ಮಾತು ವಿಸುನೂರ್ ರಾಮಚಂದ್ರ ರೆಡ್ಡಿ. ತೆಲಂಗಾಣ ಪ್ರದೇಶದಲ್ಲಿ ನಲ್ಗೊಂಡಾ ಜಿಲ್ಲೆಯ ಕುಖ್ಯಾತ ದೇಶಮುಖ - ಜಮೀಂದಾರ. 40 ಸಾವಿರ ಎಕ್ರೆಗಳ ಭೂಮಾಲಕ. ಪಾಲಕುರ್ತಿ ಗ್ರಾಮದ ಮಡಿವಾಳದ ಮಹಿಳೆ ಐಲಮ್ಮನ ಹೆಸರಿನಲ್ಲಿದ್ದ ಜಮೀನನ್ನು ಕಿತ್ತುಕೊಳ್ಳುವ ಯೋಜನೆ ಹಾಕಿದ. ಐಲಮ್ಮ ತೆಲಂಗಾಣಾ ಪ್ರದೇಶದ ಗ್ರಾಮ-ಗ್ರಾಮಗಳಿಗೆ ವ್ಯಾಪಿಸಲಾರಂಭಿಸಿದ್ದ ರೈತ ಸಂಘದ ಸಕ್ರಿಯ ಕಾರ್ಯಕರ್ತೆ. ಹಿಂದಿನ ದಿನ ರೈತ ಸಂಘದ ಸಾರ್ವಜನಿಕ ಸಭೆಯಲ್ಲಿ ಗೂಂಡಾಗಳ ಮೂಲಕ ಸಂಘದ ಮುಂದಾಳುಗಳು ಕೊಲೆಗೆ ಆತ ಪ್ರಯತ್ನಿಸಿದ್ದ. ಜನ ಅವನ ಈ ಯೋಜನೆಯನ್ನು ವಿಫಲ ಗೊಳಿಸಿದ್ದರು. ಗೂಂಡಾಗಳನ್ನು ಹೊಡೆದೋಡಿಸಿದ್ದರು. ಈ ನೆವ ಮಾಡಿ 14 ಮಂದಿ ಮುಂದಾಳುಗಳನ್ನು . ಆತ ಬಂಧಿಸುವಂತೆ ಮಾಡಿದ್ದ. ಇದರಿಂದ ಹೆದರಿಕೊಂಡ ಗ್ರಾಮದ ಜನ ಐಲಮ್ಮನ ಜಮೀನಿನಿಂದ ಬೆಳೆ ಕಟಾವು ಮಾಡಿಸಿ ಒಯ್ಯಲು ತಡೆಯಲಿಕ್ಕಿಲ್ಲ ಎಂಬ ವಿಶ್ವಾಸ ಜಮೀದಾರನದು. ಆದ್ದರಿಂದ 100 ಕೆಲಸಗಾರರನ್ನು ಬೆಳೆ ಕಟಾವಿಗೆ ಕಳಿಸಿದ, ಜತೆಗೆ 100 ಗೂಂಡಾಗಳನ್ನೂ.

ಇದನ್ನು ಕಂಡ . ಸಂಘದ ಮುಖಂಡರು, 28 ಸ್ವಯಂ ಸೇವಕರನ್ನು ಕೂಡಿ ಹಾಕಿ ಲಾಠಿ ಗಳೊಂದಿಗೆ ಸಜ್ಜಿತರಾಗಿ ಹೊರಟರು, ಪ್ರಾಣ ಬೇಕಾದರೆ ಹೋಗಲಿ, ದೇಶಮುಖನ ವಿಶ್ವಾಸ ಮುರಿಯಬೇಕು ಎಂಬ ದೃಢ ನಿರ್ಧಾರದಿಂದ. ಸೇನಾ ತುಕಡಿಗಳಂತೆ ಶಿಸ್ತಿನಿಂದ, ದೃಢ ವಿಶ್ವಾಸದಿಂದ ಬರುತ್ತಿದ್ದ ಅವರನ್ನು ನೋಡಿದ ಗೂಂಡಾಗಳು ಹೆದರಿದರು.. ಹಿಂಜರಿದರು. ಬೆನ್ನ ತಿರುಗಿಸಿ . ಕಾಲುಕಿತ್ತರು. ಐಲಮ್ಮನ ಜಮೀನಿನ ಬೆಳೆಯ ಕಟಾವು ಮಾಡಿ ಸಂಘದ ಸ್ವಯಂಸೇವಕರೇ ಐಲಮ್ಮನ ಮನೆಗೆ ತಲುಪಿಸಿದರು.

ಈ ಘಟನೆ ಕ್ರೂರ ಅಟ್ಟಹಾಸದಿಂದ ಮೆರೆಯುತ್ತಿದ್ದ ವಿಸುನೂರ್ ದೇಶಮುಖನಿಗೆ ದೊಡ್ಡ ಮುಖಭಂಗವಾಗಿತ್ತು. ಅತ್ತ ಜನರ ಉತ್ಸಾಹ ನೂರ್ಮಡಿಯಾಯ್ತು.

ಕನಲಿದ ದೇಶಮುಖ ಮಧ್ಯರಾತ್ರಿಯ ವೇಳೆಗೆ ಸಂಘದ ಆರು ಮುಖಂಡರನ್ನು ಪೋಲೀಸರು ಕೈಕಾಲುಗಳಿಗೆ ಕೋಳತೊಡಿಸಿ ಜೈಲಿಗೊಯ್ಯುವಂತೆ, ಅಲ್ಲಿ ನಿಜಾಮನ ಪೋಲೀಸರ ಕುಖ್ಯಾತ ಅತ್ಯಾಚಾರಕ್ಕೆ ಒಳಪಡಿಸುವಂತೆ ಮಾಡಿದ. ಆದರೂ ಐಲಮ್ಮನ ಜಮೀನು ಆತನಿಗೆ ದಕ್ಕಲಿಲ್ಲ.

ಇದು ತನ್ನ ಜೀವಮಾನದಲ್ಲೆಂದೂ ಕಾಣದ ದೊಡ್ಡ ಸೋಲಾಗಿತ್ತು ಆ ಜಮೀದಾರನಿಗೆ. ಹೇಗಾದರೂ ಈ ಸಂಘವನ್ನು ಮುರಿಯಬೇಕು. ಸಂಘದ ಮುಖಂಡರನ್ನು ಮುಗಿಸಿ ಬಿಡಬೇಕು. ಬೇರೆಯವರನ್ನು ಕೇಸುಗಳಲ್ಲಿ ಸಿಗ ಹಾಕಿ ನರಳಿಸ ಬೇಕು. ಆದರಿಂದ ಬೇರೆಯವರು ಸಂಘದ ಬಳಿ ಬರದಂತೆ ಮಾಡಬೇಕು. ಇದು ಆತನ ಯೋಚನೆ. ಪೋಲೀಸ್ ಅಧಿಕಾರಿಗಳೊಂದಿಗೆ ಇದನ್ನು ಕೂಲಂಕುಷವಾಗಿ ಚರ್ಚಿಸಿದ. ಅವರು 14 ಮುಂದಾಳುಗಳನ್ನು ಬಂಧಿಸಿ ಗ್ರಾಮ ಬಿಟ್ಟು ತೆರಳಿದರು. ಜಮೀದಾರ ಮುಕ್ತವಾಗಿ ತನ್ನ ಕಾರ್ಯಾಚರಣೆ ನಡೆಸಲಿ ಎಂದು.

ಬೆಳಗಿನ ಜಾವ ಕುಡಿದು ಮತ್ತರಾದ ಗೂಂಡಾಗಳು ಸಂಘದ ಮುಂದಾಳುಗಳ ಮನೆಯ ಮೇಲೆ ಕಲ್ಲು ತೂರಲಾರಂಭಿಸಿದರು. ಸುದ್ದಿ ತಿಳಿದ ಜನ ಲಾಠಿಗಳಿಂದ ಸಜ್ಜಿತರಾಗಿ ಹೊರಬಂದರು. ಮುಗಿಲು ಮುಟ್ಟುವ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದರು. ಗ್ರಾಮದ ರೈತ ಸಂಘದ ಮುಂದಾಳು ದೊಡ್ಡ ಕೊಮರಯ್ಯ ಈ ಮೆರವಣಿಗೆಯ ನೇತೃತ್ವ ವಹಿಸಿದ್ದರು. ಮೆರವಣಿಗೆ ಜಮೀದಾರನ ಮನೆಯ ಮುಂದೆ ಹಾದು ಹೋಗುವಾಗ ಪಕ್ಕದ ಶೆಡ್‌ನಲ್ಲಿ ತಲೆ ಮರೆಸಿಕೊಂಡಿದ್ದ ಗೂಂಡಾಗಳು ಗುಂಡುಗಳ ಸುರಿಮಳೆ ನಡೆಸಿದರು. ದೊಡ್ಡಿ ಕೊಮರಯ್ಯನವರ ಹೊಟ್ಟೆಗೆ

ಇತಿಹಾಸ ಪುಟಗಳಿಂದ

ಒಂದು ಗುಂಡು ತಾಕಿತು. ಆತ ಹುತಾತ್ಮರಾದರು. ಅವರ ಅಣ್ಣ ದೊಡ್ಡಿ ಮಲ್ಲಯ್ಯನವರ ಕಾಲಿಗೆ ಗುಂಡು ತಾಕಿ ಬಿದ್ದರು. ಮಂಗಲಿ ಕೊಂಡಯ್ಯನವರಿಗೆ ಹಣೆಯ ಮೇಲೆ, ಆತನ ತಮ್ಮ ನರಸಯ್ಯನವರ ಕೈಗೆ ಗುಂಡು ತಗುಲಿತು.

ಆದರೆ ಜನ ಭಯಭೀತರಾಗಲಿಲ್ಲ. ಚೆಲ್ಲಾಪಿಲ್ಲಿಯಾಗಲಿಲ್ಲ. ಜಮೀದಾರನ ಮಹಲನ್ನು ಸುತ್ತುವರಿದರು. ಸುತ್ತಲಿನ ಹಳ್ಳಿಗಳಿಗೂ ಸುದ್ದಿ ತಲುಪಿಸಲಾಯಿತು. ಅವರೂ ಒಣ ಹುಲ್ಲು, ಸೀಮೆ ಎಣ್ಣೆಯೊಂದಿಗೆ ಓಡೋಡಿಬಂದರು. ಜಮೀನುದಾರನ ಮಹಲಿಗೆ ಬೆಂಕಿಯಿಡಲು. ಒಟ್ಟು 2 ಸಾವಿರ ಜನ ಅದನ್ನು ಸುತ್ತುವರೆದರು. ಕೆಲವರು ಊರ ಹೊರಗೆ ಕಾವಲು ನಿಂತರು. ಸುದ್ದಿ ತಿಳಿದು ಸಹಾಯಕ್ಕೆಂದು 200 ಗೂಂಡಾಗಳನ್ನು ಕಲೆ ಹಾಕಿ ಕತ್ತಿ, ಖಡ್ಗ, ಪಿಸ್ತೂಲುಗಳೊಂದಿಗೆ ಬರುತ್ತಿದ್ದ ದೇಶ ಮುಖನ ಮಗನ ತಂಡವನ್ನು ಅಲ್ಲೇ ತಡೆ ಹಿಡಿದು ಹಿಮ್ಮೆಟ್ಟಿಸಿದರು. ಮೂರು ಮೈಲಿಗಳವರೆಗೆ ಓಡಿಸಿಕೊಂಡು ಹೋದರು.

ಇಷ್ಟು ಹೊತ್ತಿಗೆ ಮಿಸಲು ಪೋಲೀಸರು ಬಂದರು. ಗೂಂಡಾಗಳು ವಿರುದ್ಧ ತಾವು ಕ್ರಮ ತೆಗೆದುಕೊಳ್ಳುವುದಾಗಿ ಜನರಿಗೆ ಹೇಳಿದರು. ಜನ ಅವರ ಮಾತುಕತೆಗೆ ಬೆಲೆಕೊಟ್ಟು ಚದುರಿದರು. ಕೂಡಲೇ ಗೂಂಡಾಗಳನ್ನು ಜಮೀನುದಾರನಿಗೇ ಒಪ್ಪಿಸಲಾಯಿತಲ್ಲದೆ, ಸಂಘದ ಮುಖಂಡರ ಮೇಲೆ ಕೇಸುಗಳನ್ನು ಹಾಕಲಾಯಿತು - ಗೂಂಡಾಗಳ ಮೇಲೆ ಹಲ್ಲೆ ನಡೆಸಿದರು ಎಂದು! ಸಂಘದ ಮುಂದಾಳುವೊಬ್ಬರ ಕೊಲೆಯಾಗಿದ್ದರೂ ಒಬ್ಬನೇ ಒಬ್ಬ ಗೂಂಡಾನನ್ನು ಬಂಧಿಸಲಿಲ್ಲ.

ಆದರೂ ಜನ ಧೃತಿಗೆಡಲಿಲ್ಲ. ದೊಡ್ಡಿ ಕೊಮರಯ್ಯನವರ ಅಂತಿಮ ಸಂಸ್ಕಾರದಲ್ಲಿ ಸಾವಿರಾರು ಜನ ಪಾಲ್ಗೊಂಡರು. ಪಕ್ಕದ ಹಲವು ಹಳ್ಳಿಗಳಿಂದ ಬಂದಿದ್ದವರೆಲ್ಲಾ ಸೇರಿ ಪ್ರತಿಜ್ಞೆ ಮಾಡಿದರು ಜಮೀಂದಾರನೆದುರು ತಲೆಬಗ್ಗಿಸುವುದಿಲ್ಲ.. ಬದಲಿಗೆ ಇನ್ನಷ್ಟು ಇಮ್ಮಡಿ ಉತ್ಸಾಹ ದಿಂದ ಸಂಘ ಕಟ್ಟುತ್ತೇವೆ ಎಂದು.

ಅಂದು ಜುಲೈ 4,1946. ದೊಡ್ಡಿ ಕೋಮರಯ್ಯನವರು ಹುತಾತ್ಮರಾಗಿ ತೆಲಂಗಾಣಾದ ರೈತರಲ್ಲಿ ಹುದುಗಿದ್ದ ಕ್ರೋಧವೆಲ್ಲಾ ಲಾವಾರಸವಾಗಿ ಭುಗಿಲೆನ್ನುವಂತೆ ಮಾಡಿದ್ದರು. ನಲಗೊಂಡ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲಿ, ರೈತರುಸಡ್ಡು ಹೊಡೆದು ನಿಂತರು. ಅವರ ನಾಯಕ ದೊಡ್ಡಿ ಕೋಮರಯ್ಯನವರ ವೀರಗಾಥೆ ಹಾಡಾಗಿ ಜಿಲ್ಲೆಯಲ್ಲೆಲ್ಲಾ ಪ್ರತಿಧ್ವನಿಗೊಳ್ಳಲಾರಂಭಿಸಿತು.

ಲಾಠಿ ಗಳೊಂದಿಗೆ ಸಜ್ಜಿತರಾದ ಜನ ಈ ವೀರಗಾಥೆ ಹಾಡಿ ಮೆರವಣಿಗೆಯಲ್ಲಿ ಇನ್ನೊಂದು ಹಳ್ಳಿಗೆ ಹೋಗುತ್ತಿದ್ದರು. ಆ ಹಳ್ಳಿಯ ಜನಸೇರಿಕೊಳ್ಳುತ್ತಿದ್ದರು ಅಲ್ಲಿಯ ಜಮೀಂದಾರನಮಹಲಿನ ಎದುರು ಸಭೆನಡೆಯುತ್ತಿತ್ತು. ಒಂದು ಕಂಬ ಊರಿ ಕೆಂಬಾವುಟ ಹಾರಿಸಿ ಘೋಷಣೆಯಾಗುತ್ತಿತ್ತು - "ಇಲ್ಲಿ ಸಂಘ ಸ್ಥಾಪನೆಯಾಗಿದೆ. ಬಿಟ್ಟಿ ದುಡಿಮೆ ಇನ್ನಿಲ್ಲ. ಕಾನೂನು ಬಾಹಿರ ಸುಲಿಗೆ ಇನ್ನಿಲ್ಲ. ಒಕ್ಕಲೆಬ್ಬಿಸುವುದು ಇನ್ನು ಸಾಧ್ಯವಿಲ್ಲ. ಇದರ ನಂತರ ಮೊದಲು ಹಳ್ಳಿಯ ಕೆಲವರು ಹಿಂದಿರುಗುತ್ತಾರೆ. ಉಳಿದವರು ಎರಡನೇಹಳ್ಳಿಯವರೊಂದಿಗೆ ಮತ್ತೊಂದು ಹಳ್ಳಿಯತ್ತ ಸಾಗುತ್ತಾರೆ. ಅಲ್ಲೂ ಇದೇ ರೀತಿ. ಎಲ್ಲಾಕಡೆ ಸ್ಥಳೀಯ ಮುಖಂಡರು ಭಾಷಣ ಮಾಡುತ್ತಿದ್ದರು. ಸ್ಥಳೀಯ ಜನ ಬೇರೆ ಗ್ರಾಮದಿಂದ ಬಂದವರಿಗೆ ಊಟದ ವ್ಯವಸ್ಥೆ ಮಾಡುತ್ತಿದ್ದರು. ಕೆಲವೇ ವಾರಗಳಲ್ಲಿ ರೈತಸಂಘದ ಆಂದೋಲನದ ನಲಗೊಂಡಾ ಜಿಲ್ಲೆ ಮಾತ್ರ ವಲ್ಲ. ಪಕ್ಕದ ವಾರಂಗಲ್ ಮತ್ತು ಖಮ್ಮಂ ಜಿಲ್ಲೆಯ 300-400 ಹಳ್ಳಿಗಳಿಗೆ ವ್ಯಾಪಿಸಿತು.

ಸರಕಾರ ಲೆವಿ ಸಂಗ್ರಹ ಮಾಡುವುದು ಸಾಧ್ಯವೇ ಇರಲಿಲ್ಲ. ಬಿಟ್ಟಿ ದುಡಿಮೆ ತಂತಾನೇ ಕೊನೆಗೊಂಡಿತ್ತು. ವೀರ ತೆಲಂಗಾಣಾ ಹೋರಾಟದ ಕಿಡಿ ಹೊತ್ತಿತ್ತು.

ನಿಮಗಿದು ಗೊತ್ತೇ ?

"ಕಾರ್ಮಿಕ ವರ್ಗದ ಪಕ್ಷದ ಮುಖ್ಯ ನಾಯಕ ಪಾತ್ರ ಅದು ಕ್ರಾಂತಿಯ ಮುಂಚೂಣಿಯಲ್ಲಿದ್ದುದರಿಂದಾಗಿ ಚಾರಿತ್ರಿಕವಾಗಿ ಹುಟ್ಟಿದ ಸಂಗತಿ. ಕೆಲವು ದೇಶಗಳಲ್ಲಿ ಕ್ರಾಂತಿಗೆ ಬೆಂಬಲ ನೀಡಿದ ಕೆಲವು ಪಕ್ಷಗಳು ಹೊಸ ವ್ಯವಸ್ಥೆಯಲ್ಲಿ ಸ್ಥಾನ ಗಳಿಸಿಕೊಂಡವು" ಎಂದು ಸಮಾಜವಾದಿ ದೇಶಗಳಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಕುರಿತ ಸಿ.ಪಿ.ಐ(ಎಂ) ಕೇಂದ್ರ ಸಮಿತಿಯ ದಸ್ತಾವೇಜು ಹೇಳುತ್ತದೆ.

ಜನತಾ ಚೀಣಾ ಗಣತಂತ್ರ ಇದಕ್ಕೊಂದು ಉದಾಹರಣೆ. ಚೀಣಾ ಕಮ್ಯುನಿಸ್ಟ್ ಪಕ್ಷವಲ್ಲದೆ ಎಂಟು ಇತರ ಪ್ರಜಾಸತ್ತಾತ್ಮಕ ಪಕ್ಷಗಳು ದೇಶದ ಸರಕಾರದಲ್ಲಿ, ರಾಜಕೀಯ ವ್ಯವಹಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿವೆ. ಕೇವಲ ನಾಮ ಮಾತ್ರಕ್ಕೆ ಅಲ್ಲ. ಆ ಪಕ್ಷಗಳೆಂದರೆ ಕ್ಯುಮಿಂಗ್ ಟಾಂಗ್ ಕ್ರಾಂತಿಕಾರಿ ಸಮಿತಿ, ಚೀಣಾ ಡೆಮಾಕ್ರಾಟಿಕ್ ಲೀಗ್, ಚೀಣಾ ಪ್ರಜಾಸತ್ತಾತ್ಮಕ ರಾಷ್ಟ್ರೀಯ ನಿರ್ಮಾಣ ಸಂಘ, ಪ್ರಜಾಪ್ರಭುತ್ವ ಪ್ರೋತ್ಸಾಹ ಚೀಣಾ ಸಂಘ, ಚೀಣಾ ರೈತ- ಕಾರ್ಮಿಕ ಪ್ರಜಾಪ್ರಭುತ್ವ ಪಕ್ಷ, ಚೈನಾ ಝಿ ಗೊಂಗ್ ಡಾಂಗ್ ಪಕ್ಷ, ಜಿಯುಸಾನ್ (ಸೆಪ್ಟೆಂಬರ್ 3) ಸಮಾಜ ಮತ್ತು ತೈವಾನ್ ಪ್ರಜಾಪ್ರಭುತ್ವ ಸ್ವಯಮಾಡಳಿತ ಲೀಗ್. ಈ ಎಂಟು ಪ್ರಜಾಪ್ರಭುತ್ವವಾದೀ ಪಕ್ಷಗಳ ಒಟ್ಟು ಸದಸ್ಯ ಬಲ 4 ಲಕ್ಷ

ಇವೆಲ್ಲಾ ಸಮಾಜವಾದಿ ಶ್ರಮಿಕರ ಅಥವಾ ಸಮಾಜವಾದವನ್ನು ಬೆಂಬಲಿಸುವವರ, ಸಮಾಜವಾದವನ್ನು ಕಟ್ಟುವಲ್ಲಿ ಸಹಕರಿಸಲು ಸಿದ್ಧವಿರುವವರ ರಾಜಕೀಯ ಸಂಘಟನೆಗಳು

ರಾಷ್ಟ್ರೀಯ ರಾಜಕೀಯ ಅಧಿಕಾರಿಗಳು, ಪ್ರಭುತ್ವದ ನಾಯಕರ ಆಯ್ಕೆಯಲ್ಲಿ, ಪ್ರಮುಖ ಧೋರಣೆಗಳನ್ನು ರೂಪಿಸುವಸಮಾಲೋಚನೆಗಳಲ್ಲಿ, ಪ್ರಭುತ್ವದ ವ್ಯವಹಾರಗಳ ನಿರ್ವಹಣೆಯಲ್ಲಿ ಇವು ಪೂರ್ಣವಾಗಿ ಭಾಗವಹಿಸುತ್ತಿವೆ. ಚೀಣಾ ಕ್ರಾಂತಿ ನಡೆದ ಕೂಡಲೇ ಸ್ಥಾಪನೆಯಾದ ಚೀಣೀ ಜನತಾ ರಾಜಕೀಯ ಸಲಹಾ ಸಮ್ಮೇಳನದಲ್ಲಿ ಈ ಎಂಟು ಪಕ್ಷಗಳಲ್ಲದೆ ಇತರ ರಾಜಕೀಯೇತರ ಪ್ರಜಾಪ್ರಭುತ್ವವಾದೀ ವಲಯಗಳು, ಜನತೆಯ ಸಂಘಟನೆಗಳೂ ಭಾಗವಹಿಸುವ ಮೂಲಕ ದೇಶದ ಪ್ರಜಾಸತ್ತಾತ್ಮಕ ನಿರ್ವಹಣೆಯಲ್ಲಿ ಪಾಲುದಾರರಾಗಿವೆ

ಉದಾಹರಣೆಗೆ ಡೆಮೊಕ್ರಟಿಕ್ ಲೀಗ್‌ನ ಮುಖಂಡ ಫೆ ಕ್ಸಿಯೋತೊಂಗ್ ರಾಷ್ಟ್ರೀಯ ಜನತಾ ಕಾಂಗ್ರೆಸ್ (ಚೀಣಾದ ಸಂಸತ್ತು) ನ ಸ್ಥಾಯೀ ಸಮಿತಿಯ ಉಪಾಧ್ಯಕ್ಷರು ಈ ಪಕ್ಷ 100 ಪ್ರತಿನಿಧಿಗಳು ಈ ಸಂಸತ್ತಿನ ಸದಸ್ಯರಾಗಿದ್ದಾರೆ. ಪ್ರಜಾಪ್ರಭುತ್ವ ಪಕ್ಷದ ಮುಖಂಡ ಫಂಗ್ ತಿಯೂನ್ ಚೀಣಾ ಸರಕಾರದ ಉಸ್ತುವಾರಿ ಇಲಾಖೆಯ ಉಪಮಂತ್ರಿ. ಡೆಮಾಕ್ರೆಟಿಕ್ ಲೀಗ್‌ನ ಇನ್ನೊಬ್ಬ ಮುಖಂಡ ಚೆನ್‌ಗ್ಬುರುನ್ ಜಿಯಾಂಗ್ಸಿ ಪ್ರಾಂತ್ಯದ ಉಪ ಗವರ್ನರ್. ಇವು ಕೆಲವು ಉದಾಹರಣೆಗಳಷ್ಟೆ.

Printed and Published by P. Ramachandra Rao, on behalf of ...

ಶರಾವತಿ ಹೆಂಚಿನ ಕಾರ್ಖಾನೆ ಕಾರ್ಮಿಕರ ಮುಗಿಯದ ಹೋರಾಟ

ದಿ 7.6.90 ರಂದು ಮದ್ಯಾಹ್ನ ಮೂರು ಘಂಟೆಯ ಸಮಯ, ಕೆಂಪು ಬಾವುಟ ಹಿಡಿದ, ನ್ಯಾಯಕ್ಕಾಗಿ ಘೋಷಣೆ ಕೂಗುತ್ತ 500 ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಹೊನ್ನಾವರದ ಪ್ರಮುಖ ಬೀದಿಯಲ್ಲಿ "ಶರಾವತಿ" ಹಂಚು ಕಾರ್ಖಾನೆಯ ಕಾರ್ಮಿಕರು ಮತ್ತು ಅವರನ್ನು ಬೆಂಬಲಿಸುವ ವಿದ್ಯಾರ್ಥಿ, ಯುವಜನ ರೈತರ ಮೆರವಣಿಗೆಯು 'ಟಪ್ಪಾರ್ ಹಾಲ್' ನಲ್ಲಿ ಸಾರ್ವಜನಿಕ ಸಭೆಯಾಗಿ ಮಾರ್ಪಟ್ಟಿತು. ವಿದ್ಯಾರ್ಥಿ ನಾಯಕ ಸುರೇಶ ಶಾಂಡೇಲ ಅಧ್ಯಕ್ಷತೆವಹಿಸಿದ್ದ ಸಭೆಯಲ್ಲಿ ಕಾರ್ಮಿಕರ ಸಮಸ್ಯೆ ಆಡಳಿತ ಮಂಡಳಿಯ ಕಿರುಕುಳ ಮತ್ತು ಬೇಡಿಕೆಯ ಕುರಿತು ದ.ಕ. ಹೆಂಚು ಕಾರ್ಮಿಕ ಸಂಘದ ಕಾರ್ಯದರ್ಶಿ ಕಾ॥ ಶಂಕರ, ಡಿವೈಎಫ್‌ಐನ ಕಾ॥ ಜಯಕುಮಾರ್, ರೈತ ಸಂಘದ ನರಸಿಂಹ, ಕಾರ್ಮಿಕ ನಾಯಕ ಸಿ. ನಾರಾಯಣರು ಮಾತನಾಡಿದರು. ಕಾರ್ಮಿಕರ ಹೋರಾಟಕ್ಕೆ ಬೆಂಬಲಿಸಿ ಹಲವು ಹೆಂಚುಕಾರ್ಖಾನೆಯ ನಾಯಕರುಗಳೂ ಆಗಮಿಸಿದ್ದರು.

ಜನಕಲ್ಯಾಣಕ್ಕೆ ಪೈ ಕಂಪೆನಿ

ಹೊನ್ನಾವರದ ನಗರ ಪ್ರದೇಶದಿಂದ ಆರೇಳು ಕಿಲೋಮಿಟರ್ ದೂರವಿರುವ ಮಾವಿನ ಕುರ್ವಾ ಎಂಬ ಶರಾವತಿಯಿಂದಾವೃತವಾದ ದ್ವೀಪದಲ್ಲಿ ಅಲ್ಲಿಯ ಬಡ ರೈತ ಒಕ್ಕಲಿಗರ 'ಕಲ್ಯಾಣ'ಕ್ಕಾಗಿ ಮಣಿಪಾಲದ ಪೈಗಳು 1967 ರಲ್ಲಿ ಒಂದು ಹಂಚು ಕಾರ್ಖಾನೆ ಆರಂಭಿಸಿದರು. ಕಾರ್ಮಿಕರ ಬೆವರಿನಲ್ಲಿ ನಿರಂತರವಾಗಿ ಲಾಭಗಳಿಸುತ್ತಾ ಸಾಗಿದ ಈ ಕಾರ್ಖಾನೆಯು ಮಾಲಿಕರ ಕೊಬ್ಬನ್ನು ಹೆಚ್ಚಿಸಿತೇ ವಿನಃ ಬಡ ಕಾರ್ಮಿಕರಿಗೆ ಹೇಳಿಕೊಳ್ಳುವ ಬದುಕನ್ನು ತಂದೊಡ್ಡಲಿಲ್ಲ. ಸಿಗಬೇಕಿದ್ದ ನ್ಯಾಯಯುತ ಸೌಲಭ್ಯ ಒದಗಿಸಲು ಒಪ್ಪಲಿಲ್ಲ. ಕೇವಲ ಎರಡು ವರ್ಷಗಳ ಹಿಂದೆಯಷ್ಟೇ ಸಿ.ಐ.ಟಿ.ಯು.ಗೆ ಸೇರಿ ಇಲ್ಲಿಯ ಕಾರ್ಮಿಕರಿಗೆ ತಮ್ಮ ಬೇಡಿಕೆಗಳೇನು ಎಂಬುದರಅರಿವಾಗತೊಡಗಿತ್ತು.

ಕೆಲಸ ನಿರಾಕರಿಸಿದ ಆಡಳಿತ ಮಂಡಳಿ

ಈ ಕಾರ್ಖಾನೆಯಲ್ಲಿ ಸುಮಾರು 300 ಕಾರ್ಮಿಕರು ದುಡಿಯುತ್ತಿದ್ದಾರೆ. ಕಳೆದ 6-7 ವರ್ಷದಿಂದ ದುಡಿಯುತ್ತಿದರೂ ಸುಮಾರು 80 ಕಾರ್ಮಿಕರಿಗೆ ಕೆಲಸ ಖಾಯಂ ಆಗಿಲ್ಲ. ಅಲ್ಲದೆ ಅವರಿಗೆ ಯಾವುದೇ ಸೌಲಭ್ಯರಗಳೂ ಸಿಗುತ್ತಿಲ್ಲ. ಇಲ್ಲಿಯ ಯಾವ ಕಾರ್ಮಿಕರೂ ಕೇವಲ 90 K.M. ದೂರವಿರುವ ದ. ಕನ್ನಡದ ಕಾರ್ಖಾನೆಗಳಲ್ಲಿ ದೊರೆಯುವ ಸೌಲಭ್ಯಗಳನ್ನು ಪಡೆಯುತ್ತಿಲ್ಲ. ದ.ಕ. ಹಂಚು ಕಾರ್ಮಿಕರ ಸರಾಸರಿ ಸಂಬಳ 26 ರೂ. ಗಳಾದರೆ ಇಲ್ಲಿ 11 ರಿಂದ 14 ದೊರೆಯುತ್ತಿದೆ. ಕಳೆದ ಏಪ್ರಿಲ್ ಒಂದರಿಂದ ನ್ಯಾಯಾಲಯದ ಆದೇಶದಂತೆ ಏರಿಕೆ ತುಟ್ಟಿಭತ್ಯೆ 6.84 ಪೈಸೆ ಈ ಕಾರ್ಮಿಕರಿಗೆ ಸಿಗಬೇಕಿತ್ತು. ಆದರೆ ಆಡಳಿತ ಮಂಡಳಿ ಈ ಬಗ್ಗೆ ಕೊಂಚವೂ ಗಮನ ನೀಡಲಿಲ್ಲ. ಕಾರ್ಮಿಕ ಸಂಘವು ಪ್ರತಿಸಲ ತಮ್ಮ ಬೇಡಿಕೆಯ ಪತ್ರಕೊಡುತ್ತಾ ಬಂದಿತು. ಈ ಬೇಡಿಕೆಗಳಿಗೆ ಬಗ್ಗದ ಆಡಳಿತ ಮಂಡಳಿ ದಿ 12-2-90 ರಂದು ಕಾರ್ಮಿಕರಿಗೆ ಕೆಲಸ ನಿರಾಕರಿಸಿತು. "ತಾವು ಕೊಟ್ಟಷ್ಟು ಕೂಲಿಗೆ ದುಡಿಯಿರಿ ಇಲ್ಲದಿದ್ದರೆ ಇಂದಿನಿಂದ ನಿಮಗೆ ಕೆಲಸ ಇಲ್ಲ". ಎಂದು ಹೇಳಿದ ಆಡಳಿತಮಂಡಳಿಯು ನಾಲ್ಕು ತಿಂಗಳಿಂದ ಕಾರ್ಮಿಕರಿಗೆ ಕೆಲಸ ನಿರಾಕರಿಸುತ್ತಾ ಬಂದಿದೆ.

'ಆಡಳಿತ ಮಂಡಳಿಯ ಗೂಂಡಾಗಿರಿ

ಕೆಲಸ ನಿರಾಕರಿಸಲ್ಪಟ್ಟ ಕಾರ್ಮಿಕರು ದಿನ ಬೆಳಿಗ್ಗೆ ಕಾರ್ಖಾನೆಯ ಮುಂದೆ ಕುಳಿತುಕೊಂಡು ಸಂಜೆ ಮರಳತೊಡಗಿದರು. ಈ ನಡುವೆ ಆಡಳಿತ ಮಂಡಳಿ ಕಾರ್ಮಿಕರ ಒಗ್ಗಟ್ಟು ಮುರಿಯಲು ಅನೇಕ ಸಂಚುಗಳನ್ನು ಹೂಡಲಾರಂಭಿಸಿತು. ಕಾರ್ಮಿಕ ನಾಯಕರಿಗೆ ಬೆದರಿಕೆ ಒಡ್ಡುವುದು ಅವರ ಮೇಲೆ ಪೋಲೀಸ್ ಕಂಪ್ಲೇಟ್ ಕೊಡುವುದು ಮುಂತಾದವುಗಳನ್ನು ನಡೆಸೀತು. ಆದರೆ ಇದ್ಯಾವದಕ್ಕೂ ಜಗ್ಗದ ಕಾರ್ಮಿಕರಿಗೆ ಹಲವು ವಿಧದ ಆಮಿಷ ಒಡ್ಡಲಾಯಿತು. ಧೃಮ್ಮುಗಳ ತುಂಬಾ ಹೆಂಡ ತಂದಿರಿಸಿ ಕಾರ್ಮಿಕರಿಗೆ ಆಶೆ ಒಡ್ಡಿದರು. ಇದ್ಯಾವುದೂ ಕೈಗೂಡದಾಗ ದಿ 14-5-90 ರಂದು ಸುಮಾರು 75ರಷ್ಟು ಗೂಂಡಾಗಳನ್ನು ಎಲ್ಲಿಂದಲೋ ಬಾಡಿಗೆಗೆ ಕರೆತಂದು ಕಾರ್ಮಿಕರನ್ನು ಕೆಲಸ ಮಾಡುವಂತೆ ಒತ್ತಾಯ ಪಡಿಸಿ. ಕೆಲಸ ಮಾಡಲು ನಿರಾಕರಿಸಿದ ಕಾರ್ಮಿಕರಿಗೆ ಬೆದರಿಕೆಗೆ ಹಾಕಲು ಪ್ರಾರಂಭಿಸಿದರು. ಆದರೆ ನ್ಯಾಯಪ್ರಿಯ ಕಾರ್ಮಿಕರ ಪರವಿದ್ದ ಊರಿನ ನಾಗರೀಕರೆಯು ನಾಲ್ಕು ಸಾವಿರ ಸಂಖ್ಯೆಯಲ್ಲಿ ಅಲ್ಲಿಗೆ ಬಂದು ಸೇರಿದಾಗ ಈ ಆಡಳಿತ ಮಂಡಳಿಯ ಗೂಂಡಾಗಳು ಪಲಾಯನಗೈದರು. ಇಷ್ಟೆಲ್ಲ ನಡೆಯುವಾಗ ಕಾರ್ಮಿಕ ಅಧಿಕಾರಿಗಳಾಗಲೀ. ನ್ಯಾಯರಕ್ಷಣೆ ಮಾಡುವ ಪೋಲೀಸರಾಗಲೀ ಕಾರ್ಯತತ್ಪರರಾಗದಿರುವುದು ಅವರು ಯಾರ ಹಿತಕಾಯುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಕಾರ್ಮಿಕರ ವಿರುದ್ಧ ಜನರಲ್ಲಿ ತಪ್ಪು ಅಭಿಪ್ರಾಯ ಉಂಟು ಮಾಡಲು ಹಲವು ವಿಧ ಕರ ಪತ್ರಗಳನ್ನು ಹಂಚಲಾಗಿದೆ. ಗೂಂಡಾಗಳಿಗೆ 1 ಲಕ್ಷ ರೂಪಾಯಿ ವ್ಯಯಿಸಲಾಗಿದೆ ಎಂದು ಜನರು ಹೇಳುತ್ತಿದ್ದಾರೆ. ಇದೇ ಹಣ ದುಡಿಯುವ ಕಾರ್ಮಿಕರಿಗೆ ನ್ಯಾಯವಾಗಿ ನೀಡಿದ್ದರೆ ಕಾರ್ಖಾನೆಯೂ ಪ್ರಾರಂಭವಾಗುತ್ತಿತ್ತು ನ್ಯಾಯವೂ ದೊರಕುತ್ತಿತ್ತು. ನ್ಯಾಯ ಎಂದರೇನೆಂದೇ ಅರಿಯದ, ಪೈರಿ ಮತ್ತವನ ಪಟಾಲಂಗಳ ಆಡಳಿತ ಮಂಡಳಿ ಕಾರ್ಮಿಕರೇ ಅಲ್ಲದವರನ್ನ ತಂದು ದುಡಿಯುವ ಪ್ರಯತ್ನಕ್ಕೆ ಇಳಿಯುವ ಹೊಂಚು ಹಾಕುತ್ತಿದೆ.

ಇದೆಲ್ಲವನ್ನೂ ನ್ಯಾಯಪ್ರಿಯ ಊರ ನಾಗರಿಕರಿಗೆ ತಿಳಿಸುವ ಉದ್ದೇಶದಿಂದ ಕಾರ್ಮಿಕರು ಸಭೆನಡೆಸಿದರು. ಕಾರ್ಮಿಕರ ಶಾಂತಿಪ್ರಿಯತೆ-ಐಕ್ಯತೆ ಆಳುವ ವರ್ಗದಲ್ಲಿ ಭಯ ಹುಟ್ಟಿಸಿದ್ದರಲ್ಲಿ ಯಾವುದೇ ಸಂಶಯವೇ ಇಲ್ಲ. ಸಂಬಂಧ ಪಟ್ಟವರು ಕಾರ್ಮಿಕರ ಬೇಡಿಕೆ ಈಡೇರಿಸದಿದ್ದಲ್ಲಿ ಮುಂದಿನ ಹೋರಾಟ ತೀವ್ರಗೊಳ್ಳುತ್ತದೆ.

ವರದಿ: ಸುರೇಶ್

"ನನ್ನ ಮನಮುಟ್ಟಿದ ಘಟನೆ"

ನಮ್ಮ ಕಣ್ಣ ಮುಂದೆಯೇ ಅನೇಕ ಘಟನೆಗಳು ಕ್ರಾಂತಿಕಾರಿಗಳಾದ ನಮ್ಮ ಮನಸ್ಸನ್ನು ಕಲಕುವ, ಮನ ಮುಟ್ಟುವ, ನಮ್ಮ ಚಳುವಳಿಯಲ್ಲಿ ಹೆಮ್ಮೆಗೆ ಮೂಡಿಸುವ ಘಟನೆಗಳು- ಕಾರ್ಮಿಕರ ರೈತರ ಸಾಮಾನ್ಯ ಜನರ ವೀರಾವೇಶದ ಕೃತ್ಯಗಳು - ಹೋರಾಟಗಳಲ್ಲಿ, ಹೋರಾಟಗಳ ಸೋಲಿನಲ್ಲಿ, ದಿನನಿತ್ಯದ ಬದುಕಿನಲ್ಲಿ ನಡೆಯುತ್ತಿರುತ್ತವೆ. ನಿಮ್ಮ ಮನಸ್ಸನ್ನು ತಾಕಿದ ಘಟನೆಗಳು 'ಐಕ್ಯರಂಗ' ಓದುಗರ ಮನಸ್ಸಿಗೆ ಘಟನೆಗಳುಮುಟ್ಟಲು ಒಂದರಿಂದ ಎರಡು ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

ನಿಮ್ಮ ಪತ್ರಿಕೆ 'ಐಕ್ಯರಂಗ' ದಲ್ಲಿ ಹೊಸ ಶೀರ್ಷಿಕೆಗಳು. ಓದುಗರಿಗೆ ವಿಪುಲ ಅವಕಾಶ ನೀಡುವ ಪುಟಗಳು. ಎಲ್ಲಾ ಸಂಗಾತಿಗಳೂ ಉತ್ಸಾಹದಿಂದ ಪಾಲ್ಗೊಳ್ಳುವ ಅವಕಾಶ.

'ಹರ್ಬರ್ಟ್ ಇಂಡಿಯಾ' ಸರ್ವಾಧಿಕಾರಿ ವರ್ತನೆ ವಿರುದ್ಧ ಕಾರ್ಮಿಕರು ಸಿಡಿದೆದಿದ್ದಾರೆ.

'ಹರ್ಬಟ್ ಇಂಡಿಯಾ' ದ ಕಾರ್ಮಿಕರು ಸಿ.ಐ.ಟಿ.ಯು ನೇತೃತ್ವದ ಅಲ್ರೆಡ್ - ಹರ್ಬರ್ಟ್(ಇಂಡಿಯಾ) ಎಂಪ್ಲಾಯಿಸ್ ಯೂನಿಯನ್ನಿನ ನೇತೃತ್ವದಲ್ಲಿ ಕಳೆದ ಎಂಟು ತಿಂಗಳಿಂದ ಮ್ಯಾನೇಜ್‌ಮೆಂಟ್ ನಡೆಸಿರುವ ಪ್ರಜಾಪ್ರಭುತ್ವ ವಿರೋಧಿ ದಾಳಿಗಳ ವಿರುದ್ಧ ಸಿಡಿದಿದ್ದಾರೆ. ಇದರ ಫಲವೇ ಈಗಾಗಲೇ ವರದಿಯಾಗಿರುವ ಅವರ ಅನಿರ್ದಿಷ್ಟ ಮುಷ್ಕರ.

ಸಂಘದ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವಕಾಂ.ಸಿ.ಕುಂಜಪ್ಪನ್ ಅವರನ್ನು ಅಕ್ರಮವಾಗಿ ಅಮಾನತ್ತಿನಲ್ಲಿಟ್ಟಿರುವ ಆಡಳಿತವರ್ಗ ಕಾನೂನು ಪ್ರಕಾರ ನಡೆಯಬೇಕಾದ ವಿಚಾರಣೆಯನ್ನು ಉದ್ದೇಶಪೂರ್ವಕವಾಗಿ ವಿಳಂಬಗೊಳಿಸುತ್ತಾ ಬಂದಿದೆ. ಪ್ರಧಾನ ಕಾರ್ಯದರ್ಶಿಯಾಗಿದ್ದರೂ ಅವರ ಪತ್ರಗಳಿಗೆ ಉತ್ತರಿಸದಿರುವುದು, ಅವರು ಕಾರ್ಖಾನೆ ಸಮೀಪ ಬರದಂತೆ ತಡೆಯುವುದು, ಪೋಲೀಸರನ್ನು ಉಪಯೋಗಿಸಿ ಸುಳ್ಳು ಮೊಕದ್ದಮೆಗಳು, ಅವರೊಡನೆ ಕಾರ್ಖಾನೆಯಲ್ಲಿ ಮಾತನಾಡಿದರು ಎಂಬ ಕಾರಣಕ್ಕೆ ಇತರರ ವಿರುದ್ಧ 'ಶಿಸ್ತುಕ್ರಮ'ದ ನೋಟೀಸು ಇತ್ಯಾದಿ ಕಾರ್ಮಿಕ-ವಿರೋಧಿ ಕ್ರಮಗಳನ್ನು ಕೈಗೊಳ್ಳುತ್ತಾ ಬಂದಿದೆ. ಈಗ ಕುಂಜಪ್ಪನ್ ಅವರನ್ನು ವಜಾ ಮಾಡಿರುವ ವ್ಯವಸ್ಥಾಪಕ ವರ್ಗ. ಯಾವ ಕಾನೂನು ಬದ್ಧ ಟ್ರೇಡ್ ಯೂನಿಯನ್ ಚಟುವಟಿಕೆಗಳನ್ನು ನಡೆಸಲೂ ಬಿಡುತ್ತಿಲ್ಲ.

ಇವೆಲ್ಲದಕ್ಕೆ ಒಂದು ಮುಖ್ಯ ಕಾರಣ ಕಾರ್ಖಾನೆಯ ಪರಿಸರದ, ಕಾರ್ಮಿಕರ ಪ್ರಜಾಪ್ರಭುತ್ವ ಹಕ್ಕುಗಳ ಅರಿವಿಲ್ಲದ ಒಬ್ಬ ನಿವೃತ್ತ ಮಿಲಿಟರಿ ಅಧಿಕಾರಿ ಎಂದು ಸಂಘದ ವಕ್ತಾರರು ತಿಳಿಸಿದ್ದಾರೆ. ಕಾರ್ಮಿಕ ಸಂಘದ ಕಾನೂನು ಬದ್ಧ ಹಕ್ಕುಗಳ ಲೇವಡಿ ಮಾಡುವ ಈತ ಶಿಸ್ತಿನ ಹೆಸರಲ್ಲಿ ಪೋಲೀಸರನ್ನು ಬೇಕಾಬಿಟ್ಟಿಬಳಸಿಕೊಳ್ಳುತ್ತಿದ್ದಾನೆ. ಕಾರ್ಮಿಕ ಇಲಾಖೆಯ ಅಧಿಕಾರಿಗಳಿಗೇ ನಿರ್ದೇಶನ ನೀಡುತ್ತಿದ್ದಾನೆ. ಸಂಘದ ಮುಖಂಡರನ್ನು ಹೊಡೆಸುವ ಅನಾಗರೀಕ ಬೆದರಿಕೆ ಹಾಕಿದ್ದಾನೆ.

ಆದ್ದರಿಂದ ಈ ಸರ್ವಾಧಿಕಾರಿ ಧಾಳಿಗಳನ್ನು ತಡೆಗಟ್ಟಬೇಕು, ಕಾರ್ಮಿಕ ಸಂಘದ ಪ್ರಜಾಪ್ರಭುತ್ವ ಹಕ್ಕುಗಳನ್ನು ಕಾದುಕೊಳ್ಳಬೇಕೆಂದು ನಿರ್ಧರಿಸಿರುವ ಕಾರ್ಮಿಕರು ದೃಢ ಹೋರಾಟದ ಕಣಕ್ಕಿಳಿದಿದ್ದಾರೆ ಎಂದು ಸಂಘದ ವಕ್ತಾರರು ತಿಳಿಸಿದ್ದಾರೆ.

ಕಾಂಗ್ರೆಸ ಜನವಿರೋಧಿ ನೀತಿ ಖಂಡನೆ

ಇತ್ತೀಚಿಗೆ ಕಾಂಗ್ರೆ ರಾಜ್ಯಸರಕಾರ ಅಗರಬತ್ತಿ ಉತ್ಪಾದನೆ, ಪ್ರಿಂಟಿಂಗ್ ಪ್ರೆಸ್, ರೈಸ್ ಮಿಲ್ ಹತ್ತಿ ಮತ್ತು ಸಿಲ್ಕ್, ಸಿಂತೆಟಿಕ್ ಹೆಣಿಗೆ ಮತ್ತು ಸ್ಪಿನ್ನಿಂಗ್, ಕಲ್ಲು ಕಡಿಯುವುದು ಇತ್ಯಾದಿ ಉದ್ಯಮಗಳ ಕಾರ್ಖಾನೆಗಳನ್ನು ಫ್ಯಾಕ್ಟರಿ ಆಕ್ಟಿನ ಪರಿಮಿತಿಯಿಂದ Sec 85 ಪ್ರಕಾರ ಹಿಂದಕ್ಕೆ ತಕ್ಕೊಂಡಿರುತ್ತದೆ. 1976,77 ಹಾಗೂ 89 ರಲ್ಲಿ ಈ ಕಾರ್ಖಾನೆಗಳನ್ನು ಕೆಲಸಗಾರರು ಫ್ಯಾಕ್ಟರಿ ಆಕ್ಟಿನಲ್ಲಿ ಪರಿಷ್ಕರಿಸಿದ ಮಿತಿಗಿಂತ ಕಡಿಮೆ ಇದ್ದರೂ ಫ್ಯಾಕ್ಟರಿ ಆಕ್ಟಿನ ಪರಿಮಿತಿಯಲ್ಲಿ ತರಲಾಗಿತ್ತು. ಇದರ ಉದ್ದೇಶ ಈ ಕಾರ್ಖಾನೆ ಹಾಗೂ ಉದ್ಯಮಗಳಲ್ಲಿ ನಡೆಯುವ ವಿಪರೀತ ಶೋಷಣೆಯನ್ನು ತಡೆಗಟ್ಟಿ, ಅಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ "ಸ್ವಲ್ಪ"ಹಾಗು ಇತರ ಸೌಲಭ್ಯಗಳನ್ನು ದೊರಕಿಸಿಕೊಡುವುದೇ ಆಗಿತ್ತು. ಆದರೆ ಈಗ ರಾಜ್ಯಸರಕಾರ 7-6-90 ರಂದು ಒಂದು ಆಜ್ಞೆಯನ್ನು ಹೊರಡಿಸಿ ರಾಜ್ಯದಲ್ಲಿ ಲಕ್ಷಾಂತರ ಕಾರ್ಮಿಕರನ್ನು ಮಾಲಿಕರು ಅತೀವ ಶೋಷಣೆಗೆ ಗುರಿಮಾಡಲು ದಾರಿ ಮಾಡಿಕೊಟ್ಟಿದ್ದಾರೆ. ಇನ್ಸ್‌ಪೆಕ್ಟರುಗಳು ಸಾಕಷ್ಟಿಲ್ಲದಿದ್ದಲ್ಲಿ ಅವರುಗಳ ಸಂಖ್ಯೆಯನ್ನು ಜಾಸ್ತಿ ಮಾಡುವುದು ಬಿಟ್ಟು, ಈ ಕಾರಣಕ್ಕೋಸ್ಕರ ಮಾಲಿಕರ ಮೇಲೆ ಇದ್ದ ಬಿಗಿಯನ್ನು ಸಡಿಲಿಸುವುದು ಯಾವ ನ್ಯಾಯ? ಇದು ಕಾಂಗ್ರೆಸರಕಾರದ ಮಾಲಿಕರ ಪರ ಹಾಗೂ ಕಾರ್ಮಿಕ ವಿರೋಧಿ ನೀತಿಯನ್ನು ಎತ್ತಿ ತೋರಿಸುತ್ತಿದೆ. ಸಿ.ಐ.ಟಿ.ಯು. ಬೆಂಗಳೂರು ಜಿಲ್ಲಾ ಸಮಿತಿ, ಕಾಂಗ್ರೆ ಸರಕಾರದ ಈ ಧೋರಣೆಯನ್ನು ಖಂಡಿಸುತ್ತಾ, ಕೂಡಲೇ ಈ ಕಾರ್ಮಿಕ ವಿರೋಧಿ ಪ್ರತಿಗಾಮಿಯ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತದೆ.

ಬೀಡಿ ಕಾರ್ಮಿಕರ ಸಮಸ್ಯೆ ಬಗ್ಗೆ ಸಚಿವರ ಹೇಳಿಕೆಗೆ ಖಂಡನೆ

ದಕ್ಷಿಣ ಕನ್ನಡ ಜಿಲ್ಲೆಯ ಮೂರುವರೆ ಲಕ್ಷ ಬೀಡಿ ಕಾರ್ಮಿಕರು ಕಳೆದ ಒಂದು ವರ್ಷದಿಂದ ಎದುರಿಸುತ್ತಿರುವ ಕೆಲಸ ಕಡಿತದ ಸಮಸ್ಯೆಯ ಬಗ್ಗೆ ರಾಜ್ಯಸರಕಾರದ ಕಾರ್ಮಿಕ ಮಂತ್ರಿಯವರು ವಿಧಾನಸಭೆಗೆ ನೀಡಿದ "ಸರಕಾರದ ಮಟ್ಟದಲ್ಲಿ ಬೀಡಿ ಕಾರ್ಮಿಕರ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ" ಎನ್ನುವ ಹೇಳಿಕೆಯನ್ನು ಕೋಟೆಕಾರ ಸರ್ಕಲ್ ಬೀಡಿ ಲೇಬರ್ ಯೂನಿಯನ್ (ಸಿ.ಐ.ಟಿ.ಯು) ಬಲವಾಗಿ ಖಂಡಿಸಿದೆ.

ಸಂಘದ ಕಾರ್ಯದರ್ಶಿ ಶ್ರೀಸುಕುಮಾರ್ ರವರು ಒಂದು ಹೇಳಿಕೆ 'ನೀಡಿ ಬೀಡಿ ಎಲೆ ರಾಷ್ಟ್ರೀಕರಿಸಿ ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಎಲೆ ಪೂರೈಸಲು ನಿರಾಕರಿಸುವ ಮಧ್ಯಪ್ರದೇಶದ ಸರಕಾರದ ನೀತಿ ಹಾಗು ಬೀಡಿ ಮಾಲಕರ ಲಾಭ ಕೋರ ನೀತಿಯೇ ಈ ಸಮಸ್ಯೆಗೆ ಕಾರಣ ವಾಗಿದ್ದು ಸಮಸ್ಯೆ ಪರಿಹರಿಸುವಲ್ಲಿ ರಾಜ್ಯ ಸರಕಾರವು ತನ್ನ ಜವಾಬ್ದಾರಿಯಿಂದ ಜಾರಿ ಕೊಳ್ಳಲು ಪ್ರಯತ್ನಿಸುತ್ತಿದೆಯೆಂದು ಟೀಕಿಸಿದ್ದಾರೆ.

ದಿನಗೂಲಿ ಕಾರ್ಮಿಕರಿಂದ ಸಾಕಷ್ಟು ಬೀಡಿ ಉತ್ಪಾದಿಸಲು ಪ್ರೋತ್ಸಾಹಿಸುವ ಮೂಲಕ ಜಿಲ್ಲೆಯ ಬೀಡಿ ಮಾಲಕರು ಖಾಯಂ ಕೆಲಸಗಾರರಿಗೆ ಕೆಲಸ ಕಡಿತ ಮಾಡಿ ಕಾನೂನು ಸವಲತ್ತುಗಳನ್ನು ವಂಚಿಸುವ ಪ್ರಯತ್ನವನ್ನು ಮುಂದುವರಿಸುತ್ತಿದ್ದಾರೆ.

ದಿನವೊಂದರ 800 ಬೀಡಿಯ ಕೆಲಸ ಕೊಡಲು ಅಸಾಧ್ಯವಾದಲ್ಲಿ ಕೆಲಸವಿಲ್ಲದ ದಿನಗಳಿಗೆ ಕಾನೂನು ಪ್ರಕಾರ ಪರಿಹಾರ (ಗ್ಯಾರಂಟಿ ವೇಜ್) ಕೊಡಿಸುವ ಪ್ರಯತ್ನವನ್ನು ಮಾಡದ ಸರಕಾರ ರಾಜ್ಯದ 6 ಲಕ್ಷ ಬೀಡಿ ಕಾರ್ಮಿಕರ ಹಿತಾಸಕ್ತಿಯನ್ನು ಕಡೆಗಣಿಸಿ ನೇರ ಮಾಲಕರ ಪರವಹಿಸುತ್ತಿದೆಯೆಂದುಕಾಂ॥ಸುಕುಮಾರ್‌ಆಪಾದಿಸಿದ್ದಾರೆ

ಸುದೀರ್ಘ ಮುಷ್ಕರ ಮುಕ್ತಾಯ

ಕಲಘಟಗಿ ಹಿಂದಮಾತಾ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ "ಧಾರವಾಡ ಜಿಲ್ಲಾ ಜನರಲ್ ಎಂಪ್ಲಾಯಿಸ್ ಯುನಿಯನ್"ನಾಯಕತ್ವದಲ್ಲಿ ದಿನಾಂಕ 22-3-1990 ರಿಂದ ಮುಷ್ಕರದ ಮೇಲಿದ್ದರು.

ಆಡಳಿತವರ್ಗ ಹಟಮಾರಿ ಸಂಘ ವಿರೋಧಿ ನೀತಿಯಿಂದಾಗಿ ದಿ: 2-5-90 ರಂದು ಸಂಧಾನಾಧಿಕಾರಿಗಳ ಕಛೇರಿಯಲ್ಲಿ ನಡೆದ ಸಂಧಾನ ವಿಫಲವಾಯಿತು.

ಸಂಘವು ತನ್ನ ಬೇಡಿಕೆಗಳ ಈಡೇರಿಕೆಗಾಗಿ ಕಾ॥ 16.6.90 ರಿಂದ 25-6-90 ರವರೆಗೆ ಸರದಿ ಅನ್ನಸತ್ಯಾಗ್ರಹ ಪ್ರಾರಂಭಿಸಿತು. ಅಲ್ಲದೆ ಕಾ: ರಿಂದ ಆಮರಣಾಂತ ಉಪವಾಸದ ನೋಟೀಸ್ ಕೊಡಲಾಗಿತ್ತು.

ಈ ಮಧ್ಯೆ ಸರಕಾರಿ ಅಧಿಕಾರಿಗಳ ಮಧ್ಯಸ್ಥಿಕೆಯಿಂದ ಹಾಗೂ ಇತರ ಕಾರ್ಮಿಕ ಸಂಘಟನೆಗಳ ಸೌಹಾರ್ದ ಬೆಂಬಲದಿಂದಾಗಿ ದಿನಾಂಕ 27-6-90 ರಂದು ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಯಲ್ಲಿ ಸಂಧಾನವು ಯಶಸ್ವಿಯಾಯಿತು. ಒಪ್ಪಂದಕ್ಕೆ ಬರಲಾಯಿತು. ಕಾರಣ ಉದ್ದೇಶಿತ ಆಮರಣ ಉಪವಾಸವನ್ನು ಕೈಬಿಡಲಾಯಿತು. ಸದರಿ ಹೋರಾಟಕ್ಕೆ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ಸಹಾಯ ಬೆಂಬಲನೀಡಿದ ಎಲ್ಲ ಸಂಘಟನೆಗಳಿಗೂ ಸರಕಾರಿ ಅಧಿಕಾರಿಗಳಿಗೂ, ಸ್ಥಳೀಯ ನಾಗರಿಕರಿಗೂ ರಾಜಕೀಯ ಮುಖಂಡರಿಗೂ, ಸಂಘದ ಪರವಾಗಿ ಕಾ॥ ಎಂ.ಬಿ. ಶೆಟ್ಟಿ ಹಾಗೂ ಕಾ॥ ಎಸ್.ಆರ್. ಶೆಟ್ಟಿ ತಮ್ಮ ಕೃತಜ್ಞತೆಗಳನ್ನು ಈ ಮೂಲಕ ಅರ್ಪಿಸುತ್ತಾರೆ.

'ಐಕ್ಯರಂಗ' ಪ್ರಶ್ನೋತ್ತರ ವಿಭಾಗ

ನಮ್ಮ ಸಂಗಾತಿಗಳಿಗೆ ಹಲವಾರು ಪ್ರಶ್ನೆಗಳು ಎದುರಾಗುತ್ತಿರುತ್ತವೆ. ಈ ಪ್ರಶ್ನೆಗಳಲ್ಲಿ ಹಲವು ವಿಧ. ವಿಶ್ವದಲ್ಲಿ ಎಷ್ಟು ಕಮ್ಯುನಿಸ್ಟ್ ದೇಶಗಳಿವೆ ? ಅವು ಯಾವುವು? ವಿಯಟ್ನಾಂನಲ್ಲಿ ಕ್ರಾಂತಿ ಯಾವಾಗ ನಡೆಯಿತು? ಎಂಬ ಮಾಹಿತಿಯನ್ನು ಬಯಸುವ ಪ್ರಶ್ನೆಗಳು. ಮತ್ತೆ ಉತ್ತರಗಳನ್ನು ಬಯಸುವ ಪ್ರಶ್ನೆಗಳನ್ನು "ಐಕ್ಯರಂಗ ಪ್ರಶ್ನೋತ್ತರ ವಿಭಾಗಕ್ಕೆ" ಕಳುಹಿಸಿ. ಅಂಚೆ ಕಾರ್ಡಿನಲ್ಲಿ "ಐಕ್ಯರಂಗ ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಪೂರ್ವ ಯುರೋಪಿನ ದೇಶಗಳಲ್ಲಿ, ಸೋವಿಯತ್ ಒಕ್ಕೂಟದಲ್ಲಿ ಏನು ನಡೆಯುತ್ತಿದೆ? ಏಕೆ? ಕಾರ್ಮಿಕ ವರ್ಗದ ಚಳುವಳಿಯಲ್ಲಿ, ದುಡಿಯುತ್ತಿರುವವರಲ್ಲಿ, ಕಮ್ಯುನಿಸ್ಟ್ ಆಂದೋಲನದ ಹಿತೈಷಿಗಳಲ್ಲಿ ಎದ್ದಿರುವ ಪ್ರಶ್ನೆಗಳಿವು. ಈ ಬಗ್ಗೆ 'ಐಕ್ಯರಂಗ' ಆಗಾಗ್ಗೆ ಲೇಖನಗಳನ್ನು ಪ್ರಕಟಿಸುತ್ತಾ ಬಂದಿದೆ. ದೀರ್ಘ ಅಧ್ಯಯನ ಮತ್ತು ಚರ್ಚೆಯ ನಂತರ ಮೇ 28 ರಿಂದ 31 ರವರೆಗೆ ಸಭೆ ಸೇರಿದ್ದ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಈ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿದೆ. ಈ ನಿರ್ಣಯ ನಮ್ಮ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡಬಲ್ಲ ಒಂದು ಸಮಗ್ರ ವಿಶ್ಲೇಷಣೆಯನ್ನು ನಮ್ಮ ಮುಂದಿಟ್ಟಿದೆ. ನಮ್ಮ ಹಲವಾರು ಪ್ರಶ್ನೆಗಳನ್ನು ಅದು ಹೇಗೆ ವಿಶ್ಲೇಷಿಸಿದೆ ಎಂಬುದನ್ನು ಈ ಲೇಖನದಲ್ಲಿ ಸಂಗ್ರಹಿಸಿ ಕೊಡಲು ಯತ್ನಿಸಲಾಗಿದೆ. ಕೇಂದ್ರ ಸಮಿತಿಯ ಈ ಮಹತ್ವಪೂರ್ಣ ದಸ್ತಾವೇಜಿನ ಅಧ್ಯಯನಕ್ಕೆ ನೆರವಾಗಲೆಂದು ಈ ಸಾರಸಂಗ್ರಹ.

ಸಮಾಜವಾದಿ ದೇಶಗಳಲ್ಲಿನ ಬೆಳವಣಿಗೆಗಳ

ಕೇಂದ್ರ ಸಮಿತಿ ನಿರ್ಣಯ ಏನು ಹೇಳುತ್ತ

1

ಇತ್ತೀಚಿನ ಪೂರ್ವ ಯುರೋಪಿನ ಸಮಾಜವಾದಿ ದೇಶಗಳಲ್ಲಿನ ವಿದ್ಯಮಾನಗಳ ಹಿನ್ನೆಲೆಯಲ್ಲಿ ಈ ಎಲ್ಲದರ ಒಟ್ಟು ಅರ್ಥ ಸಮಾಜವಾದಕ್ಕೆ, ಕಮ್ಯುನಿಸ್ಟ್ ಪಕ್ಷಗಳಿಗೆ ಏನು?

ಈ ದೇಶಗಳಲ್ಲಿ, ಕಮ್ಯುನಿಸ್ಟ್-ವಿರೋಧಿ ಅಲ್ಲೋಲ ಕಲ್ಲೋಲ,
ಚುನಾವಣೆಗಳಲ್ಲಿ ಮಧ್ಯಮ, ಬಲ ಪಂಥೀಯ ಪಕ್ಷಕ್ಕೆ ಜಯ
ಮತ್ತು ಬಂಡವಾಳಶಾಹಿಯನ್ನು ಪುನಃ ಸ್ಥಾಪಿಸಲು ಪ್ರಯತ್ನ ಇವೆಲ್ಲಾ
ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಗೆ, ವಿಶ್ವ ಸಮಾಜವಾದಕ್ಕೆ
ಭಾರಿ ದೊಡ್ಡ ಹಿನ್ನಡೆ. ಸೋವಿಯತ್ ಒಕ್ಕೂಟದಲ್ಲಿ ಆರ್ಥಿಕ ಮತ್ತು
ರಾಜಕೀಯ ಸುಧಾರಣೆಗಳನ್ನು ಜಾರಿ ಮಾಡುವಲ್ಲಿ ಏಳುವ ಸಮಸ್ಯೆ
ಗಳು ಸಹ ತೀವ್ರ ಬಿಕ್ಕಟ್ಟು ಎನ್ನಬಹುದಾದ ಸ್ಥಿತಿಗೆ ಬಂದಿದೆ. ಈ
ಎಲ್ಲಾ ಬದಲಾವಣೆಗಳನ್ನು ಸಾಮ್ರಾಜ್ಯಶಾಹಿ ಪ್ರಚಾರ ಯಂತ್ರ ಕಮ್ಯು
ನಿಸ್ಟರ ಸಮಾಜವಾದದ ವಿರುದ್ಧ ಬ್ರಹ್ಮಾಸ್ತ್ರವಾಗಿ ಬಳಸುತ್ತಿದೆ. ಈ ವಿದ್ಯ
ಮಾನಗಳು ಸಮಾಜವಾದದ ಪುನರ್ನವೀಕರಣಕ್ಕೆ ಹಾದಿ ಮಾಡಿಕೊಡು
ತ್ತವೆ ಎಂಬ ಸೋವಿಯತ್ ಕಮ್ಯುನಿಸ್ಟ ಪಕ್ಷದ ನಿಲುವನ್ನು ನಮ್ಮ
ಪಕ್ಷ ಒಪ್ಪುವುದಿಲ್ಲ. ಈ ಹಿನ್ನಡೆಯ ತೀವ್ರತೆಯನ್ನು ಅವಗಣನೆ
ಮಾಡುವುದು ಸಾಮ್ರಾಜ್ಯಶಾಹಿ ಅಪಪ್ರಚಾರ ದಾಳಿಗೆ ಸೆಡ್ಡು ಹೊಡೆದು
ನಿಲ್ಲುವ ಅಂತರಾಷ್ಟ್ರೀಯ ಕಾರ್ಮಿಕ ವರ್ಗ ದಾರಿತಪ್ಪಿಸಿದಂತೆ.

2

ಈ ಎಲ್ಲಾ ಬೆಳವಣಿಗೆಯ ಅಧ್ಯಯನದ ಮೇಲೆ ಆಧರಿಸಿ ಮೂಲಭೂತ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತಗಳಲ್ಲಿ ಏನಾದರೂ ವ್ಯತ್ಯಾಸ, ಬದಲಾವಣೆಗಳು ಇದೆಯೆ?

1957/1960 ರಲ್ಲಿ ಜಗತ್ತಿನ ಹಲವು ಕಮ್ಯುನಿಸ್ಟ್ ಪಕ್ಷಗಳು ಸಭೆ ಸೇರಿ ಅಂಗೀಕರಿಸಿದ ನಿರ್ಣಯದಲ್ಲಿ ಇರುವ ಮೂರು ಪ್ರಮುಖ ಅಂಶಗಳು ಆ ಮೇಲಿನ ಬೆಳವಣಿಗೆಯ ನೆರಳಲ್ಲಿ ಸರಿಯಲ್ಲ ಎಂದು ತಿಳಿದು ಬಂದಿದೆ. ಅವು ಈ ರೀತಿ ಇವೆ.

ಮೊದಲನೆಯದಾಗಿ, ಸ್ವಲ್ಪವೇ ಸಮಯದಲ್ಲಿ ಸಮಾಜವಾದಿ ಬಣ ಬಂಡವಾಳಶಾಹಿ ಬಣದ ಉತ್ಪಾದನೆಯನ್ನು ಮೀರುತ್ತದೆ.

ಎರಡನೆಯದಾಗಿ, ಬಂಡವಾಳಶಾಹಿ ವ್ಯವಸ್ಥೆ ಮೂರನೇಯ ಮತ್ತು ಬಹುಮುಖ ಬಿಕ್ಕಟ್ಟಿನಲ್ಲಿ ಸಿಲುಕಿ ನಾಶವಾಗಿ ಹೋಗುತ್ತದೆ.

ಮೂರನೇಯದಾಗಿ, ವಿಜ್ಞಾನ ಮತ್ತು ತಂತ್ರಜ್ಞಾನದ ಬಳಕೆಗೆ ಬಂಡವಾಳಶಾಹಿ ಅಡೆತಡೆ ಒಡ್ಡುತ್ತದೆ.

ಇದರ ಆಧಾರದ ಮೇಲೆ, ಬಂಡವಾಳಶಾಹಿ ಬೇಗನೇ ಕುಸಿದು ಬೀಳುತ್ತದೆ, ಸಮಾಜವಾದಿ ಕ್ರಾಂತಿಗೆ ಭಾರಿ ಸಾಧ್ಯತೆಗಳು ಬರುತ್ತವೆ ಎಂದು ತಪ್ಪಾಗಿ ಅಂದಾಜು ಮಾಡಲಾಗಿತ್ತು.

ಆದರೆ ಈ ಹೇಳಿಕೆಯಲ್ಲಿರುವಂತೆ ಈ ಕಾಲಘಟ್ಟ ಬಂಡವಾಳ ಶಾಹಿಯಿಂದ ಸಮಾಜವಾದ ದತ್ತ ಹೋಗುವ ಸಂಕ್ರಮಣ ಕಾಲ ಎಂಬ ಮೂಲಭೂತ ಅರ್ಥೈಸುವಿಕೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

4

ಪೂರ್ವ ಯುರೋಪಿನ ವಿದ್ಯಮಾನಗಳಲ್ಲಿ ಸೋವಿಯತ್ ಪಾತ್ರ ಏನು?

ಪೂರ್ವ ಯುರೋಪಿನ ವಿದ್ಯಮಾನಗಳಿಗೆ ಮುಖ್ಯ ಮೂರು ಕಾರಣಗಳನ್ನು ಈಗಾಗಲೇ ಮೇಲೆ ಹೇಳಲಾಗಿದೆ. ಅವಲ್ಲದೆ ಇನ್ನೂ ಇತರ ಕಾರಣಗಳು ಇವೆ. ಇದರಲ್ಲಿ ಒಂದು ಸೋವಿಯತ್ ಒಕ್ಕೂಟದ 'ಗ್ಲಾಸ್‌ನೋಸ್ತ್'ನ (ಮುಕ್ತ) ವಾತಾವರಣದಲ್ಲಿ ಸಮಾಜವಾದಿ-ವಿರೋಧಿ ಶಕ್ತಿಗಳು ಪರಿಸ್ಥಿತಿಯ ದುರ್ಲಾಭ ಪಡೆದವು ಸಮಾಜವಾದಿ ಮೌಲ್ಯಗಳ ಮೇಲೆ ಧಾಳಿ ಮಾಡಲು. ಇದಲ್ಲದೆ ಈ ದೇಶದ ಕಮ್ಯುನಿಸ್ಟ್ ಪಕ್ಷದಲ್ಲಿ ಬಂದ ಹೊಸ ನಾಯಕತ್ವ, ಹಳೆಯ ನಾಯಕತ್ವದ ಬಗ್ಗೆ ಮಾಡಿದ (ಇದರಲ್ಲಿ ಹೆಚ್ಚಿನವರು ಫ್ಯಾಸಿಸ್ಟ್ ವಿರೋಧಿ ಹೋರಾಟದ ಮಹಾನ್ ನಾಯಕರು) ಅಚಾರಿತ್ರಿಕ ಟೀಕೆ, ಕೇವಲ ನಕಾರಾತ್ಮಕ ವಿಶ್ಲೇಷಣೆ, ಸಮಾಜವಾದಿ ಚರಿತ್ರೆಯ ನಿರಾಕರಣೆ ಪಕ್ಷದ ಬಗ್ಗೆ ಜನರಿಗೆ ನಂಬಿಕೆ ಗೌರವ ಇನ್ನೂ ಕಡಿಮೆ ಮಾಡಿದವು. ಇವು ಬಲಪಂಥೀಯ ಪಕ್ಷಗಳ ವಿರುದ್ಧ ಹೋರಾಟದಲ್ಲಿ ಕಮ್ಯುನಿಸ್ಟ್ ಕಾರ್ಯಕರ್ತರ ಸ್ಥೈರ್ಯ, ನೈತಿಕ ಬಲ ಕುಗ್ಗಿಸಿದವು.



'ನಮಗೆ ಕೆಲಸಕೊಡಿ' - ಶ್ರೀಮಂತ ಅಮೆರಿಕಾ.
ಯುರೋಪಿನಲ್ಲಿ ಚಾಚಿರುವ ನಿರುದ್ಯೋಗಿಗಳ ಕೈಗಳು

3

ಪೂರ್ವ ಯುರೋಪಿನ ದೇಶಗಳ ವಿದ್ಯಮಾನಗಳಿಗೆ ಮೂಲಭೂತ ಕಾರಣಗಳು ಏನು?

ಇದಕ್ಕೆ ಮೂರು ಮುಖ್ಯ ಕಾರಣಗಳಿವೆ.

ಮೊದಲನೆಯದಾಗಿ, ಸಮಾಜವಾದವನ್ನು ಕಟ್ಟುವಲ್ಲಿ ಈ ದೇಶದ ಕಮ್ಯುನಿಸ್ಟ್ ಪಕ್ಷಗಳು ಮಾಡಿರುವ ಪ್ರಮಾದಗಳು, ವಿಕೃತಿಗಳು.

ಎರಡನೆಯದಾಗಿ, ಸಮಾಜವಾದಿ ಪ್ರಭುತ್ವ ಮತ್ತು ಸಮಾಜವಾದಿ ಪ್ರಜಾಪ್ರಭುತ್ವ ಕೆಲಸ ನಿರ್ವಹಿಸಿದ ರೀತಿ.

ಮೂರನೆಯದಾಗಿ, ಈ ದೇಶಗಳ ಕಮ್ಯುನಿಸ್ಟ್ ಪಕ್ಷಗಳ ಚಾರಿತ್ರಿಕ ಹಿನ್ನೆಲೆ ಮತ್ತು ಈ ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ಆದ ರೀತಿ.

ಮೊದಲ ಎರಡು ಕಾರಣಗಳಿಂದ ಈ ದೇಶಗಳ ಜನತೆ ಒಂದು ಕಡೆ, ಸಮಾಜವಾದಿ ಪ್ರಭುತ್ವ ಮತ್ತು ಆಳುವ ಕಮ್ಯುನಿಸ್ಟ್ ಪಕ್ಷ ಇನ್ನೊಂದು ಕಡೆ - ಇವುಗಳ ನಡುವೆ ಭಾರಿ ಕಂದಕ ಉಂಟಾಯಿತು. ಇಂತಹ ಭಾರಿ ಕಂದಕದಿಂದ ಉಂಟಾದ ತೀವ್ರ ಅತೃಪ್ತಿ ಮತ್ತು ಜನತೆಯ ಮಧ್ಯೆ ಸೈದ್ಧಾಂತಿಕ ಕೆಲಸವನ್ನು ನಿರ್ಲಕ್ಷಿಸಿದ್ದನ್ನು ಸಾಮ್ರಾಜ್ಯಶಾಹಿ ಮತ್ತು ಆಂತರಿಕ ಪ್ರತಿಗಾಮಿಗಳು ಪೂರ್ಣವಾಗಿ ಕ್ರಾಂತಿ ವಿರೋಧಿ ಉದ್ದೇಶಗಳಿಗೆ ಬಳಸಿದರು.

ಸಮಾಜವಾದಿ ಪ್ರಜಾಪ್ರಭುತ್ವವನ್ನು ಪಕ್ಷ ನಿರ್ವಹಿಸಿದ ರೀತಿ ಅದು ಬೂರ್ಜ್ವಾ ಪ್ರಜಾಪ್ರಭುತ್ವಕ್ಕಿಂತ ಉತ್ತಮ ವ್ಯವಸ್ಥೆ ಎನ್ನುವ ರೀತಿಯಲ್ಲಿ ಇರಲಿಲ್ಲ. ಸಮಾಜವಾದಿ ಪ್ರಭುತ್ವದ ಮೂಲಭೂತವಾದ ನೀತಿಯಾದ ಕಾರ್ಮಿಕ ವರ್ಗದ ಸರ್ವಾಧಿಕಾರ ನಿರ್ವಹಿಸಿದ ರೀತಿಯಲ್ಲಿ ಪ್ರಮಾದಗಳು ವಿಕೃತಿಗಳು ನಡೆದಿದೆ. ಇದು ನಿಜ ಜೀವನದಲ್ಲಿ ಪಕ್ಷದ ಸರ್ವಾಧಿಕಾರವಾಗಿತ್ತು. ಕೆಲವು ದೇಶಗಳಲ್ಲಿ ಪಕ್ಷದ ನಾಯಕತ್ವದ ಒಂದು ಸಣ್ಣ ಗುಂಪಿನ ಸರ್ವಾಧಿಕಾರ ಕೂಡಾ ಆಗುವಷ್ಟು ಗಂಭೀರವಾಗಿತ್ತು. ಪಕ್ಷದಲ್ಲಿ 'ಪ್ರಜಾತಾಂತ್ರಿಕ ಕೇಂದ್ರವಾದ' ತತ್ವದ ಆಚರಣೆಯಲ್ಲಿ ಸಹ ವಿಕೃತಿಗಳು ಕಂಡು ಬಂದವು. ಪರಿಣಾಮವಾಗಿ ವ್ಯಕ್ತಿ ಸ್ವಾತಂತ್ರ್ಯದ ಮೇಲೆ ಅನಗತ್ಯ ... ಸಮಾಜವಾದಿ ಕಾನೂನು ಭದ್ರತೆಯ ತೀವ್ರ ಉಲ್ಲಂ... ಪಕ್ಷ, ಸರಕಾರ ಮತ್ತು ಜನತೆ ನಡುವೆ ತೀವ್ರ ಕಂದಕ ನಿರ್ಮಿ...

ಮೊದಲ ದಶಕಗಳಲ್ಲಿ ಅಪ್ರತಿಮ ಮುನ್ನಡೆ, ಅ... ಸಾಧಿಸಿದ ಈ ದೇಶಗಳಲ್ಲಿ ಬೆಳವಣಿಗೆ ಸ್ಥಗಿತತೆಯ ಹಂ... ಈ ಹಂತದಲ್ಲಿ ಆರ್ಥಿಕತೆ ಜನತೆಯ ಆ... ಪೂರೈಸುವುದರಲ್ಲಿ ಸೋತಿತು. ಹೊಸ ಹಂತದಲ್ಲಿ ... ಸಾಧನಗಳ ಬೆಳವಣಿಗೆ ಜತೆ, ನಿರ್ವಹಣೆಯ ರೀತಿ ... ವೈಜ್ಞಾನಿಕ - ತಾಂತ್ರಿಕ ಕ್ರಾಂತಿಯನ್ನು ಮುನ್ನಡೆಯ... ಸಾಧ್ಯವಾಗದೆ ಹೋದದ್ದು ಬೆಳವಣಿಗೆಯ ಸ್ಥಗಿತತೆಗೆ ಕಾರಣ...

ಈ ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ನಡೆದದ್ದು, ಕಮ್ಯುನಿಸ್ಟ್ ಪಕ್ಷಗಳ ಆಂತರಿಕ ಬಲದಿಂದ ಮಾತ್ರವ... ವರ್ಗ ಹೋರಾಟದ ಪರಿಣಾಮವಾಗಿ ಅಲ್ಲ. ಅದು ಸೋವಿಯತ್ ಕೆಂಪು ಸೈನ್ಯದ ಬೆಂಬಲದಿಂದ ಫ್ಯಾಸಿಸ್ಟ್ ... ಹೋರಾಟದ ವಿಜಯದ ಹಿನ್ನೆಲೆಯಲ್ಲಿ. ಯುಗೋಸ್ಲಾ... ಚೆಕೋಸ್ಲೋವಾಕಿಯ ಬಿಟ್ಟರೆ ಉಳಿದೆಡೆ ಪಕ್ಷಗಳು ಬಲಶಾಲಿಯಾಗಿ ಇರಲಿಲ್ಲ. ಇದಲ್ಲದೆ ಈ ಪಕ್ಷಗಳ ... ವಿರೋಧಿ ಹೋರಾಟದಲ್ಲಿ ಭಾರಿ ಸಂಖ್ಯೆಯಲ್ಲಿ ಅತ್ಯ... ಸಮರ್ಥ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಕಳೆದು... ಇಂತಹ ಸಂಘಟನಾ ದುರ್ಬಲತೆಯ ಕಮ್ಯುನಿಸ್ಟ್ ... ಆಗಿನ ಸಮಾಜವಾದಿ ಪಕ್ಷಗಳು ವಿಲೀನವಾದವು. ... ಪಕ್ಷಗಳ ಸಂಘಟನಾ ಸೈದ್ಧಾಂತಿಕ ದುರ್ಬಲತೆಗೆ ಚಾರಿತ್ರಿಕ ... ಯಾವುದೇ ಅನುಭವದ ಅಭಾವದಿಂದಾಗಿ ತಮ್ಮ ದೇಶ... ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳದೆ ಮಾದರಿಯನ್ನು ಕಣ್ಣುಮುಚ್ಚಿ ಅಂಗೀಕರಿಸಿದವು.

5

ಈಗ ಎಲ್ಲಾ ಕಡೆ ಎಬ್ಬಿಸಲಾಗುತ್ತಿರುವ 'ಬಹು ಪಕ್ಷೀಯ ವ್ಯವಸ್ಥೆ' ಬೇಡಿಕೆ ಬಗ್ಗೆ ನಮ್ಮ ಅಭಿಪ್ರಾಯ ಏನು?

ಪ್ರಶ್ನೆ ನಿಜವಾಗಲೂ 'ಬಹು ಪಕ್ಷೀಯ' ಅಥವಾ 'ಏಕಪಕ್ಷೀಯ' ಪ್ರಜಾಪ್ರಭುತ್ವ ವ್ಯವಸ್ಥೆಯದಲ್ಲ. ಬೂರ್ಜ್ವಾ ಪ್ರಜಾಪ್ರಭುತ್ವ ವ್ಯವಸ್ಥೆ ಅಥವಾ ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯದ್ದು. ಬೂರ್ಜ್ವಾ ಪ್ರಜಾಪ್ರಭುತ್ವ ವ್ಯವಸ್ಥೆ ಶೋಷಕ ಅಲ್ಪಸಂಖ್ಯಾತರು ಶೋಷಿತ ಬಹುಸಂಖ್ಯಾತರ ಮೇಲೆ ನಡೆಸುವ ಸರ್ವಾಧಿಕಾರವೇ. ಸಮಾಜವಾದಿ ಪ್ರಭುತ್ವ ಎಲ್ಲಾ ದುಡಿಯುವ ವರ್ಗಗಳು ಶೋಷಕ ಅಲ್ಪ ಸಂಖ್ಯಾತರ ಮೇಲೆ ನಡೆಸುವ ಸರ್ವಾಧಿಕಾರ. ಸಮಾಜವಾದ ಕಟ್ಟುವ ಕಾಲ ಘಟ್ಟದಲ್ಲಿ ಕಾರ್ಮಿಕ ವರ್ಗದ ಪಕ್ಷ ನಾಯಕತ್ವ ವಹಿಸುವುದು ಅನಿವಾರ್ಯವಾಗುತ್ತದೆ. ಕಾರ್ಮಿಕ ವರ್ಗ ಪ್ರಭುತ್ವ ಅಥವಾ ಆರ್ಥಿಕತೆಯನ್ನು ಕಾರ್ಮಿಕ ವರ್ಗದ ಪಕ್ಷ ನಡೆಸಲಾರದು, ನಡೆಸಬಾರದು. ಇದರಿಂದಾಗಿ ಪಕ್ಷ, ವರ್ಗ ಮತ್ತು ಪ್ರಭುತ್ವ ಒಂದೇ ಎಂದು ಆಚರಣೆಯಲ್ಲಿ ಹಲವು ಗಂಭೀರ ತಪ್ಪುಗಳಾಗಿವೆ. ಹಾಗೇನೇ ಪಕ್ಷದ ನಾಯಕತ್ವದ ಪಾತ್ರ ಸಂವಿಧಾನದ ಮೂಲಕ ಹೇರುವಂತಹದಲ್ಲ. ಪಕ್ಷ ಈ ನಾಯಕತ್ವದ ಪಾತ್ರ ಜನತೆಯ ಮಧ್ಯೆ ಸೈದ್ಧಾಂತಿಕ, ರಾಜಕೀಯ ಮತ್ತು ಸಂಘಟನಾ ಕೆಲಸಗಳ ಮೂಲಕ ಗಳಿಸಬೇಕು. ಆದ್ದರಿಂದ ಇತರ ಪಕ್ಷಗಳು ಇರಬಾರದು ಕಮ್ಯುನಿಸ್ಟ್ ಪಕ್ಷ ಅವುಗಳ ಜತೆ ಸಂಬಂಧವಿಟ್ಟುಕೊಳ್ಳ ಬಾರದು ಎಂಬುದು ಲೆನಿನ್‌ವಾದಿ ಪಕ್ಷದ ನೀತಿಯಲ್ಲ. ಕೆಲವು ದೇಶಗಳಲ್ಲಿ ಬಂದಿರುವ ಏಕ ಪಕ್ಷೀಯ ವ್ಯವಸ್ಥೆ ವಿಶಿಷ್ಟ ಚಾರಿತ್ರಿಕ ಕಾರಣಗಳಿಂದ ವಿಶಿಷ್ಟ ಕಾಲ ಘಟ್ಟದಲ್ಲಿ ಬಂದದ್ದು.

ಮನುಷ್ಯನಿಂದ ಮನುಷ್ಯನ ಶೋಷಣೆ ಮತ್ತು ಬಿಕ್ಕಟ್ಟು ಬಂಡವಾಳಶಾಹಿ ಉತ್ಪಾದನೆಯೊಳಗೇನೇ ಅಡಕವಾದ ಸಂಗತಿ. ಈ ಶೋಷಣೆಯೆಂಬುದು ಕಾರ್ಮಿಕರನ್ನು ಮೋಸಗೊಳಿಸಲಾಗುತ್ತದೆ ಎಂದಲ್ಲ, ಅಥವಾ ಮಾರುಕಟ್ಟೆಯಲ್ಲಿ ಅಸಮಾನ ವಿನಿಮಯ ನಡೆಯುತ್ತದೆ ಎಂಬುದರಿಂದಾಗಿಯೂ ಅಲ್ಲ. ಬಂಡವಾಳಶಾಹಿ ಪದ್ಧತಿಯಲ್ಲಿ "ಶ್ರಮಶಕ್ತಿ" ಎಂಬ ಸರಕು ಅಸ್ತಿತ್ವದಲ್ಲಿ ಇರುವುದರಿಂದ ಶೋಷಣೆ ನಡೆಯುತ್ತದೆ.

ಸೋವಿಯತ್ ಒಕ್ಕೂಟದ ವಿದ್ಯಮಾನ... ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಕೇಂ... 28 ನೇ ಮಹಾಧಿವೇಶನಕ್ಕೆ ಮಂಡಿಸಿರು... 'ವೇದಿಕೆ'ಯ ಬಗ್ಗೆ ನಮ್ಮ ಅಭಿಪ್ರಾಯ...

ಸೋವಿಯತ್ ಕಮ್ಯುನಿಸ್ಟ್ ಪಕ್ಷ 1985 ರಲ್ಲಿ ... (ರಾಜಕೀಯ ಸುಧಾರಣೆಗಳು) ಮತ್ತು ಪೆರೆಸ್ಟ್ರೊಯ... ಸುಧಾರಣೆಗಳು)ನ್ನು ಆರಂಭಿಸಿತು. ಇದು ಸ... ಬಂದಿರುವ ವಿಕೃತಿಗಳನ್ನು ಸರಿಪಡಿಸಲು ಅದನ್ನು ಉ... ಒಯ್ಯಲು ಅಗತ್ಯ ಎಂದು ನಮ್ಮ ಪಕ್ಷ ಅಭಿಪ್ರಾಯ್ಟ... ನೇ ಸೋವಿಯತ್ ಪಕ್ಷದ ಮಹಾಧಿವೇಶನದ... ಸುಧಾರಣೆಗಳನ್ನು ನಾವು ಸ್ವಾಗತಿಸಿದ್ದೇವೆ. ಆದರೆ ... ಮಹಾಧಿವೇಶನಕ್ಕೆ ತಯಾರಿಸಿದ 'ವೇದಿಕೆ'ಯಲ್ಲಿ ಕೆಲವು ... ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನಿಲುವುಗಳಿಂದ ದೂರಸರಿದ... ಬರುತ್ತದೆ. ಹಿಂದಿನ ಹಲವುತಪ್ಪುಗಳನ್ನು ಸರಿಪಡಿಸುವ ಭ... ಕಂಡು ಬರುತ್ತದೆ. ಕೆಲವು ಉದಾಹರಣೆಗಳು

- ಅವರು ಹೇಳುವ 'ಮಾನವೀಯ ಮತ್ತು ... ಸಮಾಜವಾದದ ಹೊಸ ಪರಿಕಲ್ಪನೆ ಸಮಾಜವಾದಿ ... ನಿರ್ಲಕ್ಷಿಸುತ್ತದೆ.
- 'ವರ್ಗ ಮೌಲ್ಯಗಳಿಗಿಂತ ವಿಶ್ವಮಾನವ ಮೌಲ್ಯಗಳ ... ನಿಲುವನ್ನು ನಾವು ಒಪ್ಪುವುದಿಲ್ಲ. ಏಕೆಂದರೆ ಇದು ... ವಿರುದ್ಧವಾದದ್ದು ಅಲ್ಲ.
- 'ಪ್ರಭುತ್ವಗಳ ನಡುವಣ ಸಂಬಂಧದ ಸಿದ್ಧಾಂತವಿ... ನಿಲುವು ಸಾಮ್ರಾಜ್ಯಶಾಹಿಯ ಅಸ್ತಿತ್ವವನ್ನು ಗಣನೆಗೆ ... ಕೊಂಡಿಲ್ಲ.
- 'ಗ್ಲಾಸ್‌ನೋಸ್ತ್' ಆಚರಣೆಗೆ ಬಂದಿರುವ ರೀತಿಯಲ್ಲಿ ... ನಕಾರಾತ್ಮಕ ಅಂಶಗಳಿವೆ. ಹಿಂದಿನ ಘಟ್ಟಗಳ ಬಗ್ಗೆ ... ಟೀಕೆಗಳು ನಡೆದಿವೆ. ಇದು ಕಾರ್ಮಿಕ ವರ್ಗವನ್ನು ಸ... ಅನುಭವಗಳ ಇತಿಹಾಸದಿಂದ ಪ್ರತ್ಯೇಕಿಸಿದಂತೆ. ಇದಲ್ಲದೆ ಗ್ಲಾ... ಎಂದರೆ ಬರಿಯ ವಿರೋಧಿ ಶಕ್ತಿಗಳಿಗೆ ವಾಕ್ - ಸ್ವಾತಂ... ಅಲ್ಲ. ಪಕ್ಷ ಸಹ ಇಂತಹ ಅಪಪ್ರಚಾರಗಳ ... ಗ್ಲಾಸ್‌ನೋಸ್ತ್‌ಗಳನ್ನು ಬಳಸಬೇಕು.
- 28 ನೇ ಕಾಂಗ್ರೆಸ್‌ಗೆ ಮೂರು 'ವೇದಿಕೆಗಳು ಬಂದಿರು... 'ಚರ್ಚಾ ಕೂಟ' ಆಗುತ್ತಿದೆಯೇ ಎಂಬ ಗುಮಾನಿ ಹುಟ್ಟಿಸುತ್ತದೆ.
- ಸಮಾಜವಾದಿ ಪಕ್ಷಗಳನ್ನು ಕಮ್ಯುನಿಸ್ಟ್ ಪಕ್ಷಗ... ಹೋಲಿಸಲಾಗುತ್ತಿದೆ. ಇವುಗಳ ನಡುವಣ ಪ್ರಮುಖ ವ್ಯ... ಬಿಟ್ಟುಕೊಡಲಾಗುವಂತೆ ಕಾಣುತ್ತಿದೆ.
- ಜನಾಂಗೀಯ ಗಲಭೆಗಳ ಬಗ್ಗೆ ಸೋವಿಯತ್ ... ತೆಗೆದುಕೊಂಡಿರುವ ...



ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಲೆನಿನ್‌ರ 120 ನೇ ಜನ್ಮದಿನಾಚರಣೆ ಸಂದರ್ಭದಲ್ಲಿ ಪ್ರಕಟಿಸಿದ ಪೋಸ್ಟರ್

6

ಲೆನಿನ್ ಹೇಳಿರುವಂತೆ "ವಿಶ್ವದ ಚರಿತ್ರೆಯ ಗತಿ ಒಂದು ಸಲೀಸಾದ ಯಾವಾಗಲೂ ಮುಮ್ಮುಖವಾದ, ಲಾಗಾ ಹಿನ್ನಡೆಗಳನ್ನು ಕಾಣದ ಒಂದು ಪ್ರಕ್ರಿಯೇ ಎಂದು ಪರಿಗಣಿಸುವುದು ದ್ವಂದ್ವಾತ್ಮಕವಲ್ಲದ, ಅವೈಜ್ಞಾನಿಕ, ತಾತ್ವಿಕವಾಗಿ ತಪ್ಪಾದ ನಿಲುವು"

7

ಸೋವಿಯತ್ ಒಕ್ಕೂಟದಲ್ಲಿ ಮಾರುಕಟ್ಟೆ ಆಧಾರಿತ ಆರ್ಥಿಕ ಸುಧಾರಣೆಗಳು ತರುವ ಬಗ್ಗೆ ನಮ್ಮ ಅಭಿಪ್ರಾಯ ಏನು?

ಒಟ್ಟಾರೆಯಾಗಿ ಆರ್ಥಿಕ ಸುಧಾರಣೆಗಳನ್ನು ಸ್ವಾಗತಿಸಿದರೂ ಮಾರುಕಟ್ಟೆ ಸಂಬಂಧಗಳು ಕೇಂದ್ರೀಯ ಯೋಜನೆಗಳು ಮತ್ತು ಆಸ್ತಿ ರೂಪಗಳ ಬಗ್ಗೆ ವೇದಿಕೆಯಲ್ಲಿ ಹೇಳಿರುವಂತೆ ಸೋವಿಯತ್ ಪಕ್ಷದ ನಿಲುವನ್ನು ನಾವು ಒಪ್ಪುವುದಿಲ್ಲ.

ಮಾರುಕಟ್ಟೆ ಸಂಬಂಧಗಳು ಮತ್ತು ಯೋಜನೆ ಪರಸ್ಪರ ವಿರುದ್ಧವಾದ ಕ್ರಮಗಳಲ್ಲ. ಆದರೆ ಪ್ರಶ್ನೆ ಒಟ್ಟಾರೆಯಾಗಿ ಆರ್ಥಿಕತೆಯನ್ನು ಯೋಜನೆ ನಿಯಂತ್ರಿಸುವುದೋ ಅಥವಾ ಮಾರುಕಟ್ಟೆಯ ಶಕ್ತಿಗಳು ನಿಯಂತ್ರಿಸುತ್ತವೋ ಎಂದು.

ಸಮಾಜವಾದದಲ್ಲಿ ಮುಖ್ಯ ಮೂರು ರೀತಿಯ ಆಸ್ತಿ ರೂಪಗಳು ಇರುತ್ತವೆ. ಖಾಸಗಿ, ಸಹಕಾರಿ ಮತ್ತು ಸರ್ಕಾರಿ. ಈ ಮೂರು ರೂಪಗಳ ನಡುವೆ ಹಲವು ಇನ್ನೂ ಹೆಚ್ಚಿನ ರೂಪಗಳು. ಅದರ ನಡುವೆ ಕಾಲ ಕಾಲದಲ್ಲಿ ಬದಲಾವಣೆ, ನಿಯಂತ್ರಣಗಳ ಅಗತ್ಯ ಇರುತ್ತದೆ. ಆದರೆ ಸರ್ಕಾರಿ ಆಸ್ತಿಯ ಪ್ರಾಥಮಿಕತೆ ಅನಿವಾರ್ಯ. ಇಂತಹ ಪ್ರಾಥಮಿಕತೆ 'ವೇದಿಕೆ'ಯ ನಿಲುವುಗಳಲ್ಲಿ ಕಾಣಬರುತ್ತಿಲ್ಲ.

ಮಾರ್ಕ್ಸ್‌ವಾದ - ಲೆನಿನ್‌ವಾದದ ಕ್ರಾಂತಿಕಾರಿ ಸಿದ್ಧಾಂತದ ಮಾರ್ಗದರ್ಶನ ಹೊಂದಿದ, ಜನರ ಆಕಾಂಕ್ಷೆಗಳೊಂದಿಗೆ ಜೀವಂತ ಸಂಪರ್ಕವಿರುವ, ಅವರ ಹೋರಾಟಗಳನ್ನು ಸಂಘಟಿಸುವ, ಅವಕ್ಕೆ ನೇತೃತ್ವ ನೀಡುವ ಮತ್ತು ಜನತೆಯ ಸಾಮೂಹಿಕ ಪ್ರಜ್ಞೆಯನ್ನು ಎತ್ತರಿಸುವ ಕಾರ್ಮಿಕ ವರ್ಗದ ಪಕ್ಷವಿಲ್ಲದೆ ಯಾವ ಕ್ರಾಂತಿಕಾರಿ ಮುನ್ನಡೆಯೂ ಸಾಧ್ಯವಿಲ್ಲ.

ಅಂತಿಮ ವಿಜಯ ಸಮಾಜವಾದಕ್ಕೇ

ಪ್ರಶ್ನೆ: 1 ಸಮಾಜವಾದದಿಂದ ಬಂಡವಾಳಶಾಹೀ ಪದ್ಧತಿಗೆ ಹಿಂತಿರುಗುವಿಕೆ ಯಾವತ್ತಿಗೂ ಉಂಟಾಗುವುದಿಲ್ಲವೆಂದು ತಾವು ಹೇಳುತ್ತಿರುವಿರಿ. ಈಗ ತಾತ್ಕಾಲಿಕವಾಗಿಯಾದರೂ ಬಂಡವಾಳಶಾಹಿ ಪದ್ಧತಿ ಜಯಶೀಲವಾಗಿರುವ ಪೋಲೆಂಡ್, ರುಮೇನಿಯ, ಮೊದಲಾದ ದೇಶಗಳಲ್ಲಿ, ಈ ಹಿಂದೆ ಇದ್ದ ವ್ಯವಸ್ಥೆ ಬಂಡವಾಳಶಾಹಿ ಪದ್ಧತಿಗಿಂತಲೂ ಕೆಟ್ಟ ವ್ಯವಸ್ಥೆಯಾಗಿತ್ತು ಎಂದಲ್ಲವೇ ನಾವು ಅರ್ಥಮಾಡಿಕೊಳ್ಳಬೇಕಾದ್ದು? ಸಮಾಜವಾದೀ ರಾಷ್ಟ್ರಗಳಲ್ಲಿ, ಯಾವ ಸಮಸ್ಯೆಗಳೂ ಇಲ್ಲ, ಅಲ್ಲಿ, ಎಲ್ಲವೂ ಸುಭಿಕ್ಷವಾಗಿವೆ ಎಂಬ ಅನಿಸಿಕೆ ಜನರಲ್ಲಿ, ಉಂಟುಮಾಡಿದ್ದರ ಮುಖ್ಯ ಜವಾಬ್ದಾರಿ ನಿಮ್ಮ ಪಕ್ಷದ ಮುಖಂಡತ್ವದ್ದಲ್ಲವೇ?

-ಕೆ.ಜನಾರ್ದನ್

ಪ್ರಶ್ನೆ: 2 'ಕಮ್ಯೂನಿಸಂ ಎಂಬ ಸ್ವರ್ಗದ ಕಂಡ ಭಾಗ್ಯವಂತರು' ಎಂಬ ತಲೆಬರಹದಲ್ಲಿ, ಮಾರ್ಚ್ 5 ರ 'ಮಾತೃಭೂಮಿ' ಪತ್ರಿಕೆಯಲ್ಲಿ ಬಂದಂತಹ ಬೋರಿಸ್‌ಯೆಲ್ಸಿನ್‌ನ ಆತ್ಮಕಥೆಯ ಭಾಗಗಳ ಕುರಿತ ತಮ್ಮ ಅಭಿಪ್ರಾಯವೇನು?

ಪಶ್ಚಿಮ ಯುರೋಪಿನಲ್ಲಿ, ನಡೆಯುತ್ತಿರುವ ಘಟನೆಗಳೂ, ರಶ್ಯಾದ ಪಾರ್ಲಿಮೆಂಟಿಗೆ ನಡೆದ ಚುನಾವಣೆಯಲ್ಲಿ, 'ಪ್ರಜಾಪ್ರಭುತ್ವವಾದಿ (ಸುಧಾರಣಾವಾದಿ)' ಗಳಿಗೆ ಸಿಗುತ್ತಿರುವ ವಿಜಯ, ಬೋರಿಸ್‌ಯೆಲ್ಸಿನ್‌ನ ಆತ್ಮಕಥೆಯ ಅಭಿಪ್ರಾಯಗಳು, ಮೊದಲಾದವುಗಳನ್ನು ಗಮನಿಸುವಾಗ, ಇಲ್ಲೆಲ್ಲಾ ಇದ್ದುದು ಸಮಾಜವಾದಿ ವ್ಯವಸ್ಥೆಯಾಗಿರಲಿಲ್ಲ, ಎಂಬುದಾಗಿ ಯಲ್ಲವೋ ಅರ್ಥ ಮಾಡಿಕೊಳ್ಳಬೇಕಾದ್ದು? ಸಿ.ಪಿ.ಐ(ಎಂ.ಎಲ್)ನ 'ಸೋಷಿಯಲ್ ಫ್ಯಾಸಿಸ್ಟ್' ಎಂಬುದಲ್ಲವೇ ಹೆಚ್ಚು ಸರಿಯಾದ ವಿಶ್ಲೇಷಣೆ? ಈ ವಿಷಯದಲ್ಲಿ ನಿಮ್ಮ ಪಕ್ಷ ತಪ್ಪು ಮಾಡಿದೆಯೆ? ಉತ್ತರ ನಿರೀಕ್ಷಿಸುತ್ತಿದ್ದೇನೆ.

ಜನಾರ್ದನ್. ಕೆ

ಇ.ಎಂ.ಎಸ್.ಪ್ರಶ್ನೋತ್ತರ



ಉತ್ತರ: ಒಂದನೆಯ ಪ್ರಶ್ನೆಯಲ್ಲಿ ಸೂಚಿಸುವಂತೆ, ಸಮಾಜವಾದೀ ರಾಷ್ಟ್ರಗಳಲ್ಲಿ ಯಾವ ಸಮಸ್ಯೆಗಳೂ ಇಲ್ಲ ಎಲ್ಲವೂ ಸಭಿಕ್ಷವಾಗಿದೆ ಎಂಬ ಅನಿಸಿಕೆ ಜನರಲ್ಲಿ ಉಂಟು ಮಾಡಿದ್ದುದರಲ್ಲಿ ಸಿ.ಪಿ.ಐ.(ಎಂ) ಗೆ ಪಾತ್ರವಿದೆ. ಆದರೆ ಪ್ರಶ್ನೆಯ ಕರ್ತೃ ತಿಳಿದುಕೊಂಡಿರುವಂತೆ ಮುಖ್ಯ ಜವಾಬ್ದಾರಿ ಸಿ.ಪಿ.ಐ.(ಎಂ)ಗೆ ಅಲ್ಲ. ಸಿ.ಪಿ.ಎಸ್.ಯೂ ಕೂಡಾ ಸೇರಿದಂತೆ ಒಟ್ಟು ಜಗತ್ತಿನ ಕಮ್ಯುನಿಸ್ಟ್ ಚಳುವಳಿಗೆ ಇದರಲ್ಲಿ ಜವಾಬ್ದಾರಿಯಿದೆ ಇದರ ಒಂದು ಪಾಲು ಸಿ.ಪಿ.ಐ.(ಎಂ)ಗೂ ಇದೆಯೆಂದು ಹೇಳುವುದು ಹೆಚ್ಚು ಸರಿಯಾಗಿರುತ್ತದೆ.

ವಿಶ್ವದಲ್ಲಿ ಮೊಟ್ಟ ಮೊದಲ ಬಾರಿಗೆ ಒಂದು ದೇಶದಲ್ಲಿ ಸಮಾಜವಾದ ಸ್ಥಾಪನೆಗೊಂಡಾಗ, ಯಾವ ಅಂಕು ಡೊಂಕುಗಳೂ ಇಲ್ಲದೆ ಸುಗಮ ದಾರಿಯಲ್ಲಿ ಸಮಾಜವಾದೀ ನಿರ್ಮಾಣ ಕಾರ್ಯ ನಡೆಯುತ್ತದೆ ಎಂಬ ಅನಿಸಿಕೆ ಹರಡಿತು. ಹೊಸ - ಸಮಾಜವಾದೀ ಸಮಾಜದ ಕುರಿತ ಕಲ್ಪನೆಗಳಿಗೂ ಮೊದಮೊದಲಾಗಿ ಸಮಾಜವಾದ ಕಟ್ಟಿ ಬೆಳೆಸುವ ದೇಶಗಳ ನಿಜ ಸ್ಥಿತಿಗೂ ಇರುವ ಅಂತರವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅದೂ ಸಾಲದೆಂಬಂತೆ, ಮೊದಲು ಸಮಾಜವಾದ ಕಟ್ಟಿ ಬೆಳೆಸಿದ ದೇಶಕ್ಕೂ ಇತರ ರಾಷ್ಟ್ರಗಳಿಗೂ ಇರುವ ವ್ಯತ್ಯಾಸಗಳನ್ನು ಸಾಕಷ್ಟು ಗಣನೆಗೆ ತೆಗೆದುಕೊಳ್ಳಲಿಲ್ಲ. ನಂತರ ಸಮಾಜವಾದೀ ಕ್ರಾಂತಿ ನಡೆದಂತಹ ದೇಶಗಳಲ್ಲೆಲ್ಲಾ, ಮೊದಲು ಕ್ರಾಂತಿ ನಡೆದ ದೇಶದಲ್ಲಿ ನಡೆದದ್ದೆಲ್ಲವೂ ಬೇರೆಡೆಯೂ ನಡೆಯುತ್ತವೆಯೆಂಬ ನಂಬಿಕೆ ಹರಡಿತು. ಹೀಗೆ ನಿಜವಾಗಿ ಬೆಳೆದು ಬರುತ್ತಿದ್ದ ಸಮಾಜವಾದಕ್ಕೂ ಸಮಾಜವಾದೀ ಕಲ್ಪನೆಗಳಿಗೂ ಮಧ್ಯದ ಅಂತರ ಬೆಳೆಯುತ್ತಾ ಬಂತು.

ಮೊದಲು ಸಮಾಜವಾದ ಕಟ್ಟಿ ಬೆಳೆಸಲು ಆರಂಭಿಸಿದ ದೇಶದಲ್ಲಿ ಸಮಾಜ ವಾದೀ ನಿರ್ಮಾಣ ಬಹಳಷ್ಟು ಜಯಪ್ರದವಾಗಿತ್ತು. ಬಂಡವಾಳಶಾಹೀ ದೇಶಗಳಲ್ಲಿ ಆದುದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ವೇಗದ ಕೈಗಾರಿಕೀಕರಣ, ವ್ಯವಸಾಯೀಕರಣ, ಶಿಕ್ಷಣ - ಆರೋಗ್ಯ ಸೌಲಭ್ಯ, ಸಮಾಜ ಕಲ್ಯಾಣ ಕಾರ್ಯಗಳ ಬೆಳವಣಿಗೆ ಇವುಗಳೆಲ್ಲದುದರ ಪರಿಣಾಮವಾಗಿ ಉಂಟಾಗುವ ಸರ್ವತೋ ಮುಖವಾದ ಪ್ರಗತಿ, ಮೊದಲಾದುವುಗಳ ವಿಷಯದಲ್ಲಿ ಅದ್ಭುತಕರವಾದ ಬೆಳವಣಿಗೆಗಳುಂಟಾದುವು. ಬೆಲೆಏರಿಕೆ ಹಣದುಬ್ಬರ, ಸ್ಥಗಿತತೆ, ಮುಂತಾದ, ಬಂಡವಾಳಶಾಹೀ ದೇಶಗಳನ್ನು ಬಾಧಿಸುವ ವಿಷಮತೆಗಳೇನೂ ಇಲ್ಲದೆ ಸಮಾಜವಾದೀ ಸಮಾಜ ಮುಂದೆ ಸಾಗಿತು. ಸಮಾಜವಾದೀ ರಾಷ್ಟ್ರಗಳಲ್ಲಿ ಸರ್ವವೂ ಸುಖಕರವಾಗಿದೆ ಎಂಬ ಅನಿಸಿಕೆ ಹರಡಿದ್ದು ಈ ಬೆಳವಣಿಗೆಗಳಿಂದಾಗಿ. ಈ ಅನಿಸಿಕೆಯನ್ನು ಹರಡಿಸುವುದರಲ್ಲಿ ಸ್ಟಾಲಿನ್‌ನ ಕಾಲದ ಸೋವಿಯತ್ ದೇಶಗಳನ್ನೊಳಗೊಂಡಂತೆ ಎಲ್ಲಾ ಸಮಾಜವಾದೀ ದೇಶಗಳ ಮುಖಂಡರು ಒಂದು ಪ್ರಮುಖ ಪಾತ್ರವಹಿಸಿದರು. ಅವರವರ ದೇಶಗಳ ಜನತೆಯ ದಿನನಿತ್ಯದ ಬದುಕು, ಆರ್ಥಿಕ-ರಾಜಕೀಯ ವ್ಯವಸ್ಥೆ, ಸಾಂಸ್ಕೃತಿಕ ಮಟ್ಟಗಳ ಕುರಿತ ಅತಿರಂಜಿತವಾದ ಚಿತ್ರಗಳನ್ನು ಬರೆದು ತೋರಿಸಿದರು. ಬದಲಾಗಿ ಬಂಡವಾಳಶಾಹೀ ರಾಷ್ಟ್ರಗಳಲ್ಲಿ ಇದ್ದ ಬಿಕ್ಕಟ್ಟು, ನಿಜಸ್ಥಿತಿ ಗಿಂತ ಹೆಚ್ಚು ಎತ್ತಿ ತೋರಿಸಿದರು. ಪ್ರಶ್ನೆಕಾರ ವಿವರಿಸುವ 'ಅನಿಸಿಕೆ' ಭಾರತವನ್ನೊಳಗೊಂಡ ಎಲ್ಲೆಡೆಯ ಕಮ್ಯೂನಿಸ್ಟರಲ್ಲೂ ಈ ಪ್ರಚಾರ ಕಾರ್ಯದ ಫಲವಾಗಿ ಉಂಟಾಯಿತು.

ಈ ರೀತಿಯ ಚಿತ್ರ ಸರಿಯಲ್ಲವೆಂದು ತಿಳಿದು ಬರಲು ಕೆಲವಾರು ವರ್ಷಗಳೇ ಹಿಡಿದವು. ಅನಂತರ ಸಮಾಜವಾದ ಪ್ರಗತಿದಾಯಕವೆಂಬಂತೆಯೇ ಹಿನ್ನಡೆಯೂ ಇರುವ ಒಂದು ವ್ಯವಸ್ಥೆಯಾಗಿದೆ ಎಂಬುದು ಸ್ಪಷ್ಟವಾಯಿತು. ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಬಿಕ್ಕಟ್ಟುಗಳಂತೆಯೇ ಅಭಿವೃದ್ಧಿಯೂ ಇದೆ ಎಂಬುದೂ ಸ್ಪಷ್ಟವಾಯಿತು. ಈ ಸ್ಥಿತಿಯಲ್ಲಿ ಸಮಾಜವಾದದಲ್ಲಿ ಕೆಲವು ಮಾರ್ಪಾಟುಗಳು ಉಂಟಾಗಬೇಕಲ್ಲದೆ ಬಂಡವಾಳಶಾಹೀ ಪ್ರತಿಯಿಂದ ಕೆಲವು ಅಂಶಗಳನ್ನು ಸ್ವೀಕರಿಸಲೂ ಬೇಕಾಗಿದೆ ಎಂಬುದರಿವಾಯಿತು. ಸೋವಿಯತ್ ಒಕ್ಕೂಟ, ಚುನಾಗಳನ್ನೊಳಗೊಂಡ ಸಮಾಜವಾದೀ ರಾಷ್ಟ್ರಗಳಲ್ಲಿ ಆರ್ಥಿಕ ರಾಜಕೀಯ, ಹಾಗೂ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿ ಮಾಡುತ್ತಿರುವುದು ಮೇಲೆ ಹೇಳಿದ ಅರಿವಿನ ಆಧಾರದಲ್ಲಿಯಾಗಿದೆ.

ಈ ಸುಧಾರಣೆಗಳ ಅಂಗವಾಗಿ ಕೆಲವು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದದಿಂದ ಹಿಂಜರಿಕೆ ಕಾಣಬಂದಿದೆ. ಬಂಡವಾಳಶಾಹಿಯದ್ದೇ ಆದ ಆರ್ಥಿಕ ಬದುಕನ್ನೂ, ರಾಜಕೀಯ ವ್ಯವಸ್ಥೆಯನ್ನು ಏರ್ಪಡಿಸುವ ಪ್ರವೃತ್ತಿ ಬೆಳೆದು ಬರುತ್ತಿದೆ. ಇದರ ಆಧಾರದಲ್ಲಿ ಸಮಾಜವಾದೀ ದೇಶಗಳೆಲ್ಲವೂ ಬಂಡವಾಳಶಾಹೀ ಪದ್ಧತಿಗೆ ಹಿಂತಿರುಗುತ್ತಿದೆ ಎಂದು ಬಂಡವಾಳಶಾಹಿ ವ್ಯವಸ್ಥೆಯ ಪ್ರಚಾರಕರು ಕೂಗಿ ಹೇಳುತ್ತಿರುವರು. ಆದರೆ ಕೆಲವು ಸಮಾಜವಾದೀ ದೇಶಗಳಲ್ಲಿ ಜಾರಿಗೊಳಿಸುತ್ತಿರುವ ಆರ್ಥಿಕ-ರಾಜಕೀಯ ಸುಧಾರಣೆಗಳಿಂದಾಗಿ ಬಂಡವಾಳಶಾಹೀ ವ್ಯವಸ್ಥೆಯ ಸಹಜ ಗುಣವಾದ ನಿರುದ್ಯೋಗ, ಬೆಲೆಯೇರಿಕೆ, ಹಣದುಬ್ಬರ, ಮೊದಲಾದುವು ಈ ದೇಶಗಳಲ್ಲಿಯೂ ಹರಡುತ್ತಿದೆ. ಈಗ ಆಗಿರುವುದು ಅದರ ಪ್ರಾರಂಭ ಮಾತ್ರ. ಅದು ಬೆಳೆದು ಬರುವಾಗ, ಇಂದು ಬಂಡವಾಳಶಾಹೀ ದೇಶಗಳಲ್ಲಿರುವಂತೆಯೇ ಸಾಮೂಹಿಕ ಚಳವಳಿಗಳೂ, ಹೋರಾಟಗಳೂ ಇಲ್ಲಿಯೂ ಬೆಳೆದು ಬರದಿರುವುದಿಲ್ಲ. ಅವುಗಳ ಆಘಾತದಿಂದ ಆರ್ಥಿಕ-ರಾಜಕೀಯ ರಂಗಗಳ ಸುಧಾರಣೆಗಳು ಪುನರ್ವಿಮರ್ಶೆಗೆ ಒಳಪಡ ಬೇಕಾಗುತ್ತದೆ.

ಮುಕ್ಕಾಲು ಶತಮಾನಗಳ ಕಾಲ ನಡೆದ ಸಮಾಜವಾದೀ ನಿರ್ಮಾಣದ ಮತ್ತು ಅದೇ ಅವಧಿಯ ಬಂಡವಾಳಶಾಹಿಯ ಬೆಳವಣಿಗೆಯ ಚರಿತ್ರೆಯನ್ನು ಗಮನಿಸುವಾಗ ಕೆಲವು ವಿಷಯಗಳು ಸ್ಪಷ್ಟವಾಗಿ ಕಂಡು ಬರುತ್ತದೆ.

ಮೊದಲನೆಯದು: ಹಿಂದುಳಿದಿದ್ದ ದೇಶಗಳನ್ನು ಶೀಘ್ರದಲ್ಲಿ ಮುಂದುವರಿದ ದೇಶಗಳನ್ನಾಗಿ ಮಾಡಿದ ಸಾಧನೆ ಸಮಾಜವಾದದ್ದು. ರಷ್ಯಾವನ್ನೊಳಗೊಂಡ ಯುರೋಪಿನ ದೇಶಗಳಿಂದ ಹಿಡಿದು ಚೀನಾವನ್ನೊಳಗೊಂಡಂತೆ ಏಷ್ಯಾದ ದೇಶಗಳವರೆಗೂ ಅತ್ಯದ್ಭುತವಾಗಿ ಬೆಳವಣಿಗೆ ಕಂಡದ್ದು ಸಮಾಜವಾದದ ಅಡಿಯಲ್ಲೇ.

ಎರಡನೆಯದು: ಹಿಂದುಳಿಯುವಿಕೆಯಿಂದ ಪ್ರಾರಂಭವಾಗಿ ಮುಂದುವರಿದ ದೇಶವಾಗಿ ಬೆಳೆದ ಸೋವಿಯತ್ ಒಕ್ಕೂಟಕ್ಕೂ ಸಹ, ಅಭಿವೃದ್ಧಿಯ ವಿಷಯದಲ್ಲಿ ಬಂಡವಾಳಶಾಹೀ ದೇಶಗಳೊಂದಿಗೆ ಸರಿಸಾಟಿಯಾಗಲು ಸಾಧ್ಯವಾಗಲಿಲ್ಲ. ಕಳೆದ ಒಂದೆರಡು ದಶಕಗಳಿಂದ, ಬಂಡವಾಳಶಾಹಿ-ಸಮಾಜವಾದಿ ದೇಶಗಳೊಳಗಿನ ಅಂತರ ಹೆಚ್ಚೇ ಆಗಿದೆ.

ಮೂರನೆಯದು: ಆರ್ಥಿಕ ಬದುಕನ್ನು ಸುಧಾರಿಸಿ ನವೀಕರಿಸುವ ವಿಷಯದಲ್ಲಿ ಸಮಾಜವಾದವು ಬಂಡವಾಳಶಾಹಿಗಿಂತ ಎಷ್ಟೋ ಹಿಂದೆ ಬಿದ್ದಿದೆ. ಇದರಂತೆಯೇ ರಾಜಕೀಯ ರಂಗದಲ್ಲಿ ಪ್ರಜಾಪ್ರಭುತ್ವವನ್ನು ವ್ಯವಸ್ಥೆಗೊಳಿಸುವುದರಲ್ಲಿಯೂ ಬಂಡವಾಳಶಾಹಿಯು ಸಮಾಜವಾದಕ್ಕೆ ಹೋಲಿಸಿದರೆ ಎಷ್ಟೋ ಮುಂದಿದೆ.

ನಾಲ್ಕನೆಯದು: ಜನಜೀವನ ಸುಧಾರಿಸುವುದರಲ್ಲಿ, ಅವರ ಬದುಕಿನ ಮಟ್ಟ ಸಾಂಸ್ಕೃತಿಕ ಮಟ್ಟಗಳನ್ನೇರಿಸುವುದರಲ್ಲಿ ಸಮಾಜವಾದವು ಬಂಡವಾಳಶಾಹಿಗಿಂತ ಎಷ್ಟೋ ಮುಂದಿದೆ. ಎರಡು ಸಮಾಜ ವ್ಯವಸ್ಥೆಗಳ ಮಧ್ಯೆಯಿರುವ ಈ ಅಂತರಗಳ ಬೆಳಕಿನಲ್ಲಿ ಜಾಗತಿಕ ಪರಿಸ್ಥಿತಿಯನ್ನು ಪರಿಶೀಲಿಸಬೇಕು. ಆರ್ಥಿಕ ರಾಜಕೀಯ ರಂಗಗಳಲ್ಲಿ ಬಂಡವಾಳಶಾಹಿಗೆ ಹೋಲಿಸಿದರೆ ಹಿಂದೆ ಬಿದ್ದಿರುವ ಸಮಾಜವಾದಕ್ಕೆ, ಆ ಹಿಂದುಳಿಯುವಿಕೆ ಪರಿಹರಿಸುವುದರೊಂದಿಗೆಯೇ ಜನತೆಯ ಜೀವನ ಮಟ್ಟ, ಸಾಂಸ್ಕೃತಿಕ ಮಟ್ಟಗಳ ಏರಿಸುವುದರಲ್ಲಿ ಸಾಧಿಸಿದ ಸಫಲತೆಗಳನ್ನು ಉಳಿಸಿಕೊಳ್ಳಬೇಕು. ಇಂದು ಅಲ್ಲಿ ನಡೆಯುತ್ತಿರುವ ಸುಧಾರಣೆಗಳು ಇವೆರಡೂ ಜೊತೆಜೊತೆಯಾಗಿ ಹೇಗೆ ಸಾಧ್ಯವೆಂಬುದರ ಕುರಿತಾದುದಾಗಿವೆ.

ಇದರ ಪರಿಣಾಮವಾಗಿ ಈಗ ತಾತ್ಕಾಲಿಕವಾಗಿ ಬಂಡವಾಳಶಾಹೀ ಮಾರ್ಗಕ್ಕೆ ಬೆಳೆಯಲಾರಂಭಿಸಿರುವ ದೇಶಗಳಲ್ಲಿಯೂ ಅಲ್ಲದೆ, ಹಾಲೀ ಬಂಡವಾಳಶಾಹೀ ಪದ್ಧತಿಯಲ್ಲಿಯೇ ಉಳಿದಿರುವ ದೇಶಗಳಲ್ಲಿಯೂ, ಆ ಪದ್ಧತಿಯ ಸಹಜ ಗುಣವಾದ ನಿರುದ್ಯೋಗ, ಬೆಲೆಯೇರಿಕೆ, ಹಣದುಬ್ಬರ, ಮೊದಲಾದವುಗಳ ವಿರುದ್ಧ ಸಾಮೂಹಿಕ ಹೋರಾಟಗಳು ಬೆಳೆಯದಿರುವುದಿಲ್ಲ. ಸಮಾಜವಾದೀ ದೇಶಗಳೆಲ್ಲ ಸಮಾಜವಾದವನ್ನು ತ್ಯಜಿಸಿ, ಬಂಡವಾಳ

ಭಯ ನಿವಾರಿಸಿ ವಿಶ್ವಾಸ ತುಂಬಿದ ಕಾನಪುರ ರ‍್ಯಾಲಿ

ರಾಮಜನ್ಮಭೂಮಿ/ಬಾಬ್ರಿ ಮಸೀದಿ ವಿವಾದದ ಜಾಗ ಇರುವ ರಾಜ್ಯ ಉತ್ತರ ಪ್ರದೇಶ. ಆದ್ದರಿಂದ ಈ ವಿವಾದದಲ್ಲಿ ಕೋಮುವಾದಿಗಳ ಸಿದ್ಧತೆ ತೀವ್ರಗೊಳ್ಳುತ್ತಿರುವಂತೆ ರಾಜ್ಯದಲ್ಲಿ ಅವರ ಕೋಮು ಪ್ರಚಾರವೂ ವ್ಯಾಪಕಗೊಳ್ಳುತ್ತಿದೆ. ಈ ಸನ್ನಿವೇಶದಲ್ಲಿ ತನ್ನ ಚಾರಿತ್ರಿಕ ಹೊಣೆ ಅರಿತಿರುವ ಉತ್ತರ ಪ್ರದೇಶ ಸಿ.ಪಿ.ಐ.(ಎಂ) ಘಟಕ ಇತರ ಎಡ ಮತ್ತು ಜಾತ್ಯತೀತ ಶಕ್ತಿಗಳ ನೆರವಿನೊಂದಿಗೆ ರಾಜ್ಯಾದ್ಯಂತ ಕೋಮುಸೌಹಾರ್ದಕ್ಕಾಗಿ ಕಳೆದ ಎರಡು ತಿಂಗಳಿಂದ ಪ್ರಚಾರ-ಪ್ರಕ್ಷೋಭೆ ನಡೆಸುತ್ತಾ ಸಾವಿರಾರು ಜನರನ್ನು ದೇಶದ ಐಕ್ಯತೆಯ ಪ್ರಶ್ನೆಯ ಸುತ್ತ ಅಣಿನೆರೆಸಿದೆ. ಈ ಪ್ರಚಾರದಲ್ಲಿ ಅದು ಕೋಮುವಾದಿಗಳಿಂದ ಹಲವಾರು ಹಲ್ಲೆ ಆಕ್ರಮಣಗಳನ್ನು ಎದುರಿಸಿ, ಅವೆಲ್ಲವನ್ನೂ ವಿಫಲಗೊಳಿಸಿತು.


ಕಾನಪುರದಲ್ಲಿ ಜೂನ್ 11 ರಂದು ಸಿ.ಐ.ಟಿ.ಯು ಧರಣಿಯ ಮೇಲೆ ಆರ್.ಎಸ್.ಎಸ್. ಭಜರಂಗದಳದ ಹಲ್ಲೆಯ ಸುದ್ದಿ ಈಗಾಗಲೇ ಓದಿರುವಿರಿ. ಇದರ ವಿರುದ್ಧ ಹಾಗೂ ಈ ಕೋಮುವಾದಿಗಳು ತಮಗೆ ಯಾವ ಕಾನೂನು ಕೂಡಾ ಅನ್ವಯವಾಗುವುದಿಲ್ಲ ಎಂಬ ಭ್ರಮೆಯಲ್ಲಿರುವುದರ ವಿರುದ್ಧ ಎಚ್ಚರಿಕೆ ನೀಡಬೇಕೆಂದು ಸಿ.ಪಿ.ಐ(ಎಂ), ಸಿ.ಪಿ.ಐ. ಜನತಾದಳ, ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್ ಮತ್ತು ಕೆಲವು ಕಾಂಗ್ರೆಸ್ ವ್ಯಕ್ತಿಗಳು ಮರುದಿನವೇ ಸಭೆ ಸೇರಿ ಜೂನ್ 11 ರಂದು ಒಂದು ಪ್ರತಿಭಟನಾ ಪ್ರದರ್ಶನ ನಡೆಸಲು ನಿರ್ಧರಿಸಿದರು.

ಜೂನ್ 11 ರಂದು ನಗರದ ಕೇಂದ್ರದಲ್ಲಿರುವ ಶಿಕ್ಷಕ ಪಾರ್ಕಿನಿಂದ ಒಂದು ಬೃಹತ್ ಮೆರವಣಿಗೆ ಆರಂಭವಾಯಿತು. ಬಿ.ಜೆ.ಪಿ., ಬಿ.ಎಂ.ಎಸ್. ಕಚೇರಿಗಳ ಎದುರಿನಿಂ[illegible] ಮೆರವಣಿಗೆ ಧೀರ ಘೋಷ[illegible] ಆರಂಭವಾಗಿತ್ತು. ಕಾರ್ಮಿಕ ಸಂಘಟನೆಗಳ, ಯುವಜನ ಸಂಘಟನೆಯ ಸಾವಿರಾರು ಕಾರ್ಯಕರ್ತರು ಅತ್ಯುತ್ಸಾಹದಿಂದ ಇದರಲ್ಲಿ ಭಾಗವಹಿಸಿದ್ದರು. ಆರ್.ಎಸ್.ಎಸ್. ಭಜರಂಗದಳ ಮತ್ತಿತರ ಕೋಮುವಾದಿ ಗ್ಯಾಂಗ್‌ಗಳು ನಗರದಲ್ಲಿ ನಿರ್ಮಿಸಿದ್ದ ಭಯದ ವಾತಾವರಣವನ್ನು ನಿವಾರಿಸಿ ಜನರಲ್ಲಿ ಹೊಸ ವಿಶ್ವಾಸ ಮೂಡಿಸಿದ ಘೋಷಣೆಗಳು ಕಾನಪುರದಲ್ಲಿ ಎಲ್ಲೆಲ್ಲೂ ಕೇಳಿ ಬಂದವು.

ಮರುದಿನ ಕೋಮುವಾದಿಗಳು ತಾವು ಹೆದರಿಲ್ಲ ಎಂದು ತೋರಿಸಿಕೊಳ್ಳಲು ಪತ್ರಿಕಾ ಹೇಳಿಕೆಗಳನ್ನು, ಪತ್ರಿಕಾ ಬೆದರಿಕೆಗಳನ್ನು ಹಾಕಿದರು. "ಸಿ.ಪಿ.ಐ.(ಎಂ) ಎಂ.ಪಿ., ಸುಭಾಷಿಣಿ ಅಲಿ ಮನೆಯಿಂದ ಎಲ್ಲೂ ಕದಲದಂತೆ ಮಾಡುತ್ತೇವೆ ಯಾವ ಸಾರ್ವಜನಿಕ ಸಭೆಯಲ್ಲೂ ಆಕೆ ಮಾತನಾಡದಂತೆ ಮಾಡುತ್ತೇವೆ", ಅದರಲ್ಲಿರುವ ಎಲ್ಲಾ "ಶತ್ರುಗಳನ್ನು" ನೋಡಿಕೊಳ್ಳುತ್ತೇವೆ ಇತ್ಯಾದಿ ಇತ್ಯಾದಿ ಅವರ ಒದರಾಟಗಳನ್ನು ಪತ್ರಿಕೆಗಳು ಪ್ರಕಟಿಸಿದ್ದವು. ಆದರೆ ಅವೆಲ್ಲಾ ಕೇವಲ ಬೊಗಳೆಗಳಾಗಿಯೇ ಉಳಿಯಬೇಕಾಗಿದೆ.

ಜೂನ್ 16 ರ ಸರ್ವಪಕ್ಷ ರ‍್ಯಾಲಿ ಈ ದುಷ್ಟ ಪ್ರಚಾರ, ಫ್ಯಾಸಿಸ್ಟ್ ಬೆದರಿಕೆಗಳಿಗೆ ತಕ್ಕ ಉತ್ತರ ನೀಡಿತು. ಈ ರ‍್ಯಾಲಿಗೆ ಸಿದ್ಧತೆಯಾಗಿ ನಗರಾದ್ಯಂತ ಹತ್ತಾರು ಸಭೆಗಳು ನಡೆದವು. ಕೋಮುವಾದಿಗಳ ಬೆದರಿಕೆಗಳಿಗೆ ಸೊಪ್ಪು ಹಾಕದೆ ಕಾಂ. ಸುಭಾಷಿಣಿ ಅಲಿ ಬಹುಪಾಲು ಸಭೆಗಳಲ್ಲಿ ಜನರನ್ನುದ್ದೇಶಿಸಿ ಮಾತನಾಡಿದರು.

ಜೂನ್ 16ರ ರ‍್ಯಾಲಿಯಲ್ಲಿ ಸಾವಿರಾರು ಮಂದಿ, ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್, ಜನತಾದಳದ ಮುಖಂಡ ಚಂದ್ರಶೇಖರ್, ಸಿ.ಪಿ.ಐ(ಎಂ) ಮುಖಂಡ ರಾಮ್‌ಸುಮೇರ್ ಯಾದವ್ ಮತ್ತಿತರ ಮುಖಂಡರ ಮಾತುಗಳನ್ನು ಅತ್ಯಂತ ಗಮನಕೊಟ್ಟು ಆಲಿಸಿದರು.



ರಾಯಪುರ ಗೋಳೀಬಾರು: ಮಿಲ್ ಮಾಲೀಕರೊಂದಿಗೆ ಬಿ.ಜೆ.ಪಿ.ಶಾಮೀಲು

ಮಧ್ಯಪ್ರದೇಶ ರಾಯಪುರ ಜಿಲ್ಲೆಯ ಅಭನ್‌ಪುರದಲ್ಲಿ ಮೇ 31ರಂದು ಪೋಲೀಸರು ಕಾರ್ಮಿಕರ ಮೇಲೆ ಗೋಳೀಬಾರು ನಡೆಸಿದ್ದರು. ಇದರಿಂದ ಒಬ್ಬ ಕಾರ್ಮಿಕ ಕೊಲ್ಲಲ್ಪಟ್ಟು ಹಲವರಿಗೆ ಗಾಯಗಳಾಗಿದ್ದವು. ಈ ಘಟನೆಯ ಅಧ್ಯಯನ ನಡೆಸಿದ ಒಂದು ಡಿ.ವೈ.ಎಫ್.ಐ. ನಿಯೋಗದ ಗಮನಕ್ಕೆ ಬಂದ ಸಂಗತಿಗಳಿಂದ ಬಿ.ಜೆ.ಪಿ.ಯ ಮುಖಂಡರು ಹನುಮಾನ್ ಅಗ್ರೋಟೆಕ್ಸ್ ಮಿಲ್ ಹಾಗೂ ನವಭಾರತ ಎಕ್ಸ್‌ಪ್ಲೋಸಿವ್ ಮಾಲೀಕರೊಂದಿಗೆ ಶಾಮೀಲಾಗಿದ್ದರು ಎಂಬ ಅಂಶ ಬೆಳಕಿಗೆ ಬಂದಿದೆ. ಮುಷ್ಕರ ನಿರತ ಕಾರ್ಮಿಕ ಮುಖಂಡರ ಬಂಧನ ವಿರೋಧಿಸಿ ಕಾರ್ಮಿಕರು ಪೋಲೀಸ್ ಠಾಣೆಯೆದುರು ಮತ ಪ್ರದರ್ಶನ ನಡೆಸಿದಾಗ ಬಿ.ಜೆ.ಪಿ.ಯ ಸ್ಥಳೀಯ ಮುಖಂಡ ಹಾಗೂ ಹೋಟೆಲ್ ಮಾಲೀಕ ಮದನ್‌ಲಾಲ್ ಗುಪ್ತಾನ ನೇತೃತ್ವದಲ್ಲಿ ಗೂಂಡಾ ಪಡೆಯೊಂದು ಕಾರ್ಮಿಕರ ಮೇಲೆ ಹಲ್ಲೆ ಮಾಡಿತು. ಅದರ ಬೆನ್ನ ಹಿಂದೆಯೇ ಪೋಲೀಸರು ಯಾವ ಮುನ್ನೆಚ್ಚರಿಕೆಯೂ ಇಲ್ಲದೆ ಗೋಳೀಬಾರು ನಡೆಸಿದರು. ರಮೇಶ ಪರೇಣ ಎಂಬ ಕಾರ್ಮಿಕ ಗುಂಡಿಗೆ ಬಲಿಯಾದ. ಹದಿನಾಲ್ಕು ವರ್ಷದ ಬಾಲಕಿಯೊಬ್ಬಳು ಅಂದಿನಿಂದ ನಾಪತ್ತೆಯಾಗಿದ್ದಾಳೆ.

ಮಧ್ಯಪ್ರದೇಶದ ಬಿ.ಜೆ.ಪಿ. ಸರಕಾರ ಕಾರ್ಮಿಕ ವಿರೋಧಿ ನಿಲುವು ತಳೆದಿರುವುದು ಮಾತ್ರವಲ್ಲ ಜನವಿರೋಧಿ ನಿಲುವು ತಳೆದಿರುವುದೂ ಹೆಚ್ಚೆಚ್ಚು ಬೆಳಕಿಗೆ ಬರುತ್ತಿದೆ. ಸಾಲರದ್ಧತಿ ಅರ್ಜಿಗಳನ್ನುಮುದ್ರಿಸಿ ಹಂಚಿ ವೋಟು ಗಿಟ್ಟಿಸಿದ ಬಿ.ಜೆ.ಪಿ. ಇದುವರೆಗೆ ಆ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಹೊಸ ನೇಮಕಾತಿಯ ಮೇಲೆ ಇರುವ ನಿರ್ಬಂಧ ತೆಗೆಯುತ್ತವೆ ಎಂದು ನೀಡಿದ ಚುನಾವಣಾ ವಚನ ಇನ್ನೂ ಹುಸಿಯಾಗಿಯೇ ಉಳಿದಿದೆ. ಕುಡಿಯುವ ನೀರಿನ ತೀವ್ರ ಅಭಾವ ಇಡೀ ರಾಜ್ಯವನ್ನೂ ವ್ಯಾಪಿಸುತ್ತಿದ್ದರೂ ಪಟ್ವಾ ಸರ್ಕಾರ ಏನೂ ಮಾಡಿಲ್ಲ. ಜಾತಿ, ಕೋಮುದಂಗೆಗಳಂತೂ ವಿಪರೀತ ಹೆಚ್ಚಿವೆ ಬಿ.ಜೆ.ಪಿ. ಮುಖಂಡರುಗಳೇ ನೇರವಾಗಿ ಇವುಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಅವರನ್ನು ರಕ್ಷಿಸಲು ಆಡಳಿತ ಸಕಲ ಕಸರತ್ತುಗಳನ್ನು ನಡೆಸುತ್ತಿದೆ. ಇಂದೂರ್ ದಂಗೆಗಳಲ್ಲಿ ಬಹಿರಂಗವಾಗಿ ಭಾಗವಹಿಸಿದ್ದರೆಂಬ ಆಪಾದನೆ ಸಾಬೀತಾಗಿರುವ ಮೂವರು ಪೋಲೀಸ್ ಇನ್ಸ್‌ಪೆಕ್ಟರ್‌ಗಳನ್ನು ಅವರ ಮೂಲ ಠಾಣೆ

ದೇಶನೋಟ

ಗಳಿಗೇ ಮತ್ತೆ ಹಿಂತೆಗೆದುಕೊಳ್ಳಲಾಗಿದೆ. ಇದನ್ನು ವಿರೋಧಿಸಿದ ರಾಜ್ಯ ಡಿ.ಜೆ.ಪಿ. ಕೂಡಾ ಬಿ.ಜೆ.ಪಿ.ಯ ಸಿಟ್ಟಿಗೆ ಪಾತ್ರರಾಗಬೇಕಾಗಿ ಬಂದಿದೆ.

ಇವೆಲ್ಲದರ ವಿರುದ್ಧ ಸಿ.ಪಿ.ಐ(ಎಂ) ರಾಜ್ಯ ಸಮಿತಿ ರಾಜ್ಯಾದ್ಯಂತ ಯಶಸ್ವಿಯಾಗಿ ಪ್ರತಿಭಟನಾ ಪಕ್ಷಾ ಚರಣೆ ನಡೆಸಿದೆ.

ಆನಂದ ಬಜಾರ್ ಪತ್ರಿಕೆಯ ಇನ್ನೊಂದು ಸುಳ್ಳು ಬಯಲು

ಜೂನ್ 19 ರಂದು ಕಲ್ಕತ್ತಾ ಸೆಷನ್ಸ್ ಕೋರ್ಟ್ ಬಹು ನಿರೀಕ್ಷಿತ ಕೇಸೊಂದರಲ್ಲಿ ತನ್ನ ತೀರ್ಪನ್ನು ನೀಡಿತು. ಜತೆಗೇ ಎಡರಂಗ ಸರ್ಕಾರದ ವಿರುದ್ಧ ಸತತ ಅಪಪ್ರಚಾರದಲ್ಲಿ ತೊಡಗಿರುವ ಆನಂದ್ ಬಜಾರ್ ಪತ್ರಿಕಾ ಗುಂಪಿನ ಇನ್ನೊಂದು ಸುಳ್ಳು ಬಟ್ಟಬಯಲಾಗಿದೆ.

1986 ಮಾರ್ಚ್ 11 ರಂದು ಲಾರೆಟೊ ಕಾಲೇಜಿನ ಮಧುಮಿತಾ ಮಿತ್ರ ಎಂಬ ಹೆಸರಿನ ವಿದ್ಯಾರ್ಥಿನಿಯ ಕೊಲೆಯಾಯಿತು. ಇದಕ್ಕೆ ಹೊಣೆ ಒಬ್ಬ ಪ್ರಮುಖ ಕಾಂಗ್ರೆಸ್(ಐ) ಮುಖಂಡ ಮೋಹನ್‌ಲಾಲ್ ದಾಸ್ ಎಂದು ನ್ಯಾಯಮೂರ್ತಿ ಎಸ್.ಎಂ. ಪಾಂಡೆ ತೀರ್ಮಾನಿಸಿ ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ.

ಅಂದು ಎಸ್.ಎಫ್.ಐ. ಮುಖಂಡರ ಕೊಲೆಯತ್ನದಲ್ಲಿ ಕಾಂಗ್ರೆ ಗೂಂಡಾಗಳು ಎಸೆದಿದ್ದ ಬಾಂಬುಗಳಲ್ಲಿ ಒಂದು ಅದೇ ಜಾಗದಿಂದ ಹಾದು ಹೋಗುತ್ತಿದ್ದ ಈ ವಿದ್ಯಾರ್ಥಿನಿಯ ತಲೆಗೆ ಬಡಿದು ಆಕೆ ಸಾವನ್ನಪ್ಪಿದ್ದಳು. ನಂತರ ಆನಂದ್ ಬಜಾರ್ ಪತ್ರಿಕೆ ಒಂದಿಷ್ಟು ನಾಟಕಗಳನ್ನು ಕಥೆಗಳನ್ನು ಬರೆದು ಕೊಲೆ ನಡೆಸಿದವರು ಸಿ.ಪಿ.ಐ.(ಎಂ) ಕಾರ್ಯಕರ್ತರು ಕಾಂಗ್ರೆಸ್ಸಲ್ಲ ಎಂದು ಸಾಧಿಸಲು ಹಠ ಪ್ರಯತ್ನ ನಡೆಸಿತು. ಕಾಂಗ್ರೆ ಹುತಾತ್ಮರಿಯಂತೆ ವರ್ಣಿಸಿತು. ಈಗ ಅವೆಲ್ಲಾ ಬರೀ ಸುಳ್ಳುಗಳು ಎಂದು ಎಲ್ಲರಿಗೂ ತಿಳಿದಂತಾಗಿದೆ.

ಹಿಂದೆ 1972 ರಲ್ಲಿ ಹೇಮಂತ ಬಸು ರವರ ಕೊಲೆಯಾಗಲೂ ಈ ಪತ್ರಿಕೆ ಇದೇ ರೀತಿ ಸುಳ್ಳು ಹರಡಿತ್ತು. ಅದೂ ಬಯಲಾಗಿತ್ತು. ಆದರೂ ನಾಚಿಕೆಯಿಲ್ಲದೆ ತನ್ನ ಸುಳ್ಳುಗಳನ್ನು ನೇಯುವ ಕೆಲಸ ಅದು ಮುಂದುವರಿಸುತ್ತಲೇ ಇದೆ ಇತ್ತೀಚಿನ ಬಂಟ್ವಾಲಾದ ಹೀನ ಕೃತ್ಯಕ್ಕೆ ಸಂಬಂಧಪಟ್ಟಂತೆ ಮತ್ತು ಕಲ್ಕತ್ತಾ ಪುರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಭಾರೀ ಸೋಲಿಗೆ "ಕಾರಣ" ಹುಡುಕುವಲ್ಲಿ.

ಮದರಾಸು ಕೊಲೆಗಳು: ಪಿ.ಬಿ. ಖಂಡನೆ

ಮದರಾಸು ನಗರದಲ್ಲಿ ಇ.ಪಿ.ಆರ್.ಎಲ್.ಎಫ್. ಪ್ರಧಾನ ಕಾರ್ಯದರ್ಶಿ ಕೆ.ಪಿ. ಪದ್ಮನಾಭ ಮತ್ತಿತರ 13 ಕಾರ್ಯಕರ್ತರ ಭೀಕರ ಕೊಲೆಯ ಬಗ್ಗೆ ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ತನ್ನ ತೀವ್ರ ಆಘಾತವನ್ನೂ, ದುಃಖವನ್ನೂ ವ್ಯಕ್ತಪಡಿಸುತ್ತಾ ಪದ್ಮನಾಭ ಅವರು ಶ್ರೀಲಂಕಾದ ಐಕ್ಯತೆಯ ಚೌಕಟ್ಟಿನೊಳಗೆ ತಮಿಳು ಅಲ್ಪ ಸಂಖ್ಯಾತರ ನ್ಯಾಯ ಹಕ್ಕುಗಳಿಗಾಗಿ ಹೋರಾಡುತ್ತಿದ್ದ ಎಡ ಪಂಥೀಯ ಮುಖಂಡರು ಎಂದು ವರ್ಣಿಸಿದೆ. ಎಲ್.ಟಿ.ಟಿ.ಇ.ಗೆ ತನ್ನ ಭಯೋತ್ಪಾದಕ ಚಟುವಟಿಕೆಗಳನ್ನು ಮುಂದುವರಿಸಲು ರಾಜ್ಯದಲ್ಲಿ ನೀಡಿರುವ ಮುಕ್ತ ಅವಕಾಶ ಉಂಟು ಮಾಡಿರುವ ತೀವ್ರ ಅಪಾಯದ ಸೂಚಕವಿದು ಎಂದಿದೆ. ಮುಖ್ಯಮಂತ್ರಿ ಕರುಣಾನಿಧಿ ಪರಿಸ್ಥಿತಿಯ ಗಂಭೀರತೆ ಅರಿತು ಈ ಭಯೋತ್ಪಾದಕ ಚಟುವಟಿಕೆಗಳನ್ನು ಕೇಂದ್ರ ಸರ್ಕಾರದ ಸಹಕಾರದೊಂದಿಗೆ ಹತ್ತಿಕ್ಕಲು ತಕ್ಷಣ ದೃಢ ಕ್ರಮಗಳನ್ನು ಕೈಗೊಳ್ಳಬೇಕೆಂದು ಪಿ.ಬಿ. ಒತ್ತಾಯಿಸಿದೆ.

ಏಕರೂಪಕ್ಕೆ ಕನಿಷ್ಟ ವೇತನ ಕಾಯಿದೆ ರೂಪಿಸಲು ಕೇರಳ ವಿಧಾನಸಭೆ ವಿನಂತಿ

ದಕ್ಷಿಣದ ಎಲ್ಲಾ ರಾಜ್ಯಗಳಲ್ಲಿ ಏಕರೂಪ ಕನಿಷ್ಠ ವೇತನ ಕಾಯಿದೆಯನ್ನು ಜಾರಿಗೊಳಿಸಬೇಕೆಂದು ಕೇಂದ್ರ ಸರಕಾರವನ್ನು ವಿನಂತಿಸುವ ಖಾಸಗಿ ಗೊತ್ತುವಳಿಯೊಂದನ್ನು ಕೇರಳ ವಿಧಾನಸಭೆ ಜೂ 29 ರಂದು ಅಂಗೀಕರಿಸಿತು.

ಸಿ.ಪಿ.ಐ. (ಎಂ) ನ ಸಿ.ಪಿ. ನಾರಾಯಣನ್ ಈ ಗೊತ್ತುವಳಿಯನ್ನು ಮಂಡಿಸಿದ್ದರು. ದಕ್ಷಿಣದ ರಾಜ್ಯಗಳ ಗೋಡಂಬಿ ಸಂಸ್ಕರಣ, ಬೀಡಿ ಮತ್ತು ಕೈಮಗ್ಗಗಳಂಥ ಸಾಂಪ್ರದಾಯಿಕ ಉದ್ಯಮಗಳಲ್ಲಿ ಏಕರೂಪ ಕನಿಷ್ಠ ವೇತನವಿಲ್ಲ.

ನೆರೆರಾಜ್ಯಗಳಲ್ಲಿ ಕಡಿಮೆ ಕನಿಷ್ಠ ವೇತನ ಇರುವುದರಿಂದ ಕೆಲವು ಸಾಂಪ್ರದಾಯಿಕ ಉದ್ದಿಮೆಗಳು ವಲಸೆ ಹೋಗಿರುವುದರಿಂದ ರಾಜ್ಯಸರಕಾರಕ್ಕೆ ಆತಂಕ ಉಂಟಾಗಿದೆ. ಅದಕ್ಕಾಗಿ ಸರಕಾರ ಈಗಾಗಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರಕಾರಕ್ಕೆ ಮನವಿ ಮಾಡಿದೆ ಎಂದು ಗೊತ್ತುವಳಿ ಮೇಲೆ ನಡೆದ ಚರ್ಚೆಯ ಅಂತ್ಯದಲ್ಲಿ ಶಿಕ್ಷಣ ಸಚಿವ ಕೆ. ಚಂದ್ರಶೇಖರನ್ ಹೇಳಿದರು.

ಮಹಾರಾಷ್ಟ್ರ: ಸಾರಿಗೆ ದರ ಏರಿಕೆ ವಿರುದ್ಧ ಸಂಯುಕ್ತ ಪ್ರದರ್ಶನ

ಮಹಾರಾಷ್ಟ್ರದ ಕಾಂಗ್ರೆಸ್ (ಐ) ಸರಕಾರ ಕರ್ನಾಟಕದಲ್ಲಿನ ಅದೇ ಪಕ್ಷದ ಸರಕಾರದ ರೀತಿಯಲ್ಲೇ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ಗಳ ಪ್ರಯಾಣದರವನ್ನು ಏರಿಸಿ ಜನರ ಅತೃಪ್ತಿಗೆ ಗುರಿಯಾಗಿದೆ. ಈ ದರ ಏರಿಕೆಯನ್ನು ಪ್ರತಿಭಟಿಸಲು ವಿವಿಧ ಪ್ರತಿಪಕ್ಷಗಳನ್ನೊಳಗೊಂಡ ಪ್ರಗತಿಪರ ಪ್ರಜಾಸತ್ತಾತ್ಮಕ ರಂಗ ಇತ್ತೀಚೆಗೆ ಮುಂಬಯಿ ಸೆಂಟ್ರಲ್ ಬಸ್ ನಿಲ್ದಾಣದಲ್ಲಿ ಭಾರೀ ಪ್ರದರ್ಶನ ನಡೆಸಿತು. ಸಂಜೆ. 4 ಗಂಟೆಯಿಂದ 6 ರವರೆಗೆ ನಡೆದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಿ.ಪಿ.ಐ.(ಎಂ) ಮತ್ತು ಜನತಾಪಕ್ಷ, ದಳದ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಎರಡೂ ಪಕ್ಷಗಳ ಮುಖಂಡರಾದ ಅಹಲ್ಯಾ ರಂಗ್ನೇಕರ್, ಮೃಣಾಲ್ ಗೋರೆ, ಕೆ.ಎಲ್.ಬಜಾಜ್, ಜಗನ್ನಾಥ ಜಾಧವ್, ಹಮೀದ್ ದಳವಾಯಿ ಮೊದಲಾದವರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಕೊಲ್ಹಾಪುರದಲ್ಲಿ ಮೆರವಣಿಗೆ ನಡೆಯಿತು.

ಇದೇ ವಿಚಾರದಲ್ಲಿ ಎಸ್.ಎಫ್.ಐ. ವರ್ಧಾನಗರ ಸಮಿತಿ ವರ್ಧಾ ಬಸ್ ನಿಲ್ದಾಣದಲ್ಲಿ ಉಪವಾಸ ಸತ್ಯಾಗ್ರಹ ನಡೆಸಿತು. ಸಾಂಗ್ಲಿಯಲ್ಲಿ ಎಸ್.ಎಫ್.ಐ. ಮತ್ತು ಎ.ಐ.ಎಸ್.ಎಫ್. ಸಂಯುಕ್ತವಾಗಿ ಮೆರವಣಿಗೆನಡೆಸಿ ಮನವಿ ಅರ್ಪಿಸಿದವು. ಸಿ.ಪಿ.ಐ. (ಎಂ) ಕಾರ್ಯಕರ್ತರು ಕೂಡ ಸಾಂಗ್ಲಿಯಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಆದಿವಾಸಿ ವಿದ್ಯಾರ್ಥಿಗಳ ಹೋರಾಟ

ತಾಲ್ಲೂಕು ಮಧ್ಯದಲ್ಲಿ ಐ.ಟಿ.ಐ. ಮತ್ತು ಕಾಲೇಜ್ ಆರಂಭಿಸಬೇಕು, ಖಾಸಗಿ ವಸತಿಗೃಹಗಳಿಗೂ ಸರಕಾರಿ ಹಾಸ್ಟೆಲ್‌ಗಳ ಸೌಲಭ್ಯಗಳನ್ನು ಒದಗಿಸಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಮಹಾರಾಷ್ಟ್ರದ ತಲಾಸರಿ ತಾಲೂಕು ಎಸ್.ಎಫ್.ಐ. ಸಮಿತಿ ಮೇ 28 ರಂದು ಧಾರಾಕಾರ ಮಳೆಯಲ್ಲೇ ಆದಿವಾಸಿ ವಿದ್ಯಾರ್ಥಿಗಳ ಬೃಹತ್ ಮೆರವಣಿಗೆಯನ್ನು ನಡೆಸಿತು.

ಸಾಲಿಡಾರಿಟಿಗೆ ಭಿನ್ನಮತೀಯರ ರಾಜಿನಾಮೆ

ಪೋಲೆಂಡ್‌ನ ಪ್ರಸ್ತುತ ಆಳುವ ಪಕ್ಷದಲ್ಲಿ ಭಾರೀ ಬಿಕ್ಕಟ್ಟು ತಲೆದೋರಿದೆ 200ಜನ ಸದಸ್ಯರಿರುವ 'ನಾಗರೀಕರ ಸಮಿತಿ' ಎಂಬ ಸಾಲಿಡಾರಿಟಿಯ ನಾಯಕತ್ವ ವಹಿಸುತ್ತಿದ್ದ ಸಮಿತಿಯಲ್ಲಿ 63 ಜನ ರಾಜಿನಾಮೆ ಕೊಟ್ಟಿದ್ದಾರೆ. ಇದರಲ್ಲಿ ಸೊಲಿಡಾರಿಟಿ ದಿನ ಪತ್ರಿಕೆಯ ಸಂಪಾದಕ ಸೊಲಿಡಾರಿಟಿ ಪಾರ್ಲಿಮೆಂಟರಿ ಗುಂಪಿನ ನಾಯಕ, ಹಲವು ಮಂತ್ರಿಗಳು ಸೇರಿದ್ದಾರೆ. ಅವರು ಲೆಕ್ ವಾಲೇಸ್ ಪೋಲೀಸ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದನ್ನು ವಿರೋಧಿಸುತ್ತಿದ್ದಾರೆ. ಅವರು ವಲೇಸಾನನ್ನು ಅಧಿಕಾರಶಾಹಿ ವರ್ತನೆ ಮತ್ತು ಅಧಿಕಾರದಾಹದ ಆರೋಪಮಾಡಿದ್ದಾರೆ.

ಈ ನಡುವೆ ಪೋಲೆಂಡ್‌ನ ರೈತರ ಚಳುವಳಿಯನ್ನು ಮುರಿಯಲು ಪೋಲೀಸು ಬಳಸಿದ್ದನ್ನು 'ಕಾರ್ಮಿಕ' ಮಂತ್ರಿ 'ಅನಿವಾರ್ಯ ಅನಿಷ್ಟ'ಎಂದು ಬಣ್ಣಿಸಿದ್ದಾರೆ. ಸ್ಥಳೀಯ ಡೈರಿ ಸಹಕಾರಿ ರೈತರಿಗೆ ಕೊಡುತ್ತಿದ್ದ ಹಾಲಿನ ಬೆಲೆಯನ್ನು ಶೇಕಡಾ 250 ಕಡಿತದ ವಿರುದ್ಧ ಅವರು ಪ್ರತಿಭಟಿಸುತ್ತಿದ್ದರು. ಮೂರು ದಿನ ಟ್ರಾಕ್ಟರುಗಳಿಂದ ಈ ರೈತರು ವಾರ್ಸಾದಿಂದ ಗಡಾನ್ಸ್‌ನ್ ಹೋಗುವ ಹೆದ್ದಾರಿ ಮೇಲೆ ಈ ರೈತರು 'ರಸ್ತಾರೋಖೋ' ಮಾಡಿದ್ದರು ಮೇ ನಲ್ಲಿ ನಡೆದ ರೈಲ್ವೇ ಮುಷ್ಕರವನ್ನು ಹೀಗೆ ಬಲಪ್ರಯೋಗ ಮಾಡಿ ಮುರಿಯಲಾಗಿತ್ತು.

ಉತ್ತರ ಅಮೆರಿಕಾದಲ್ಲಿ ಮಂಡೇಲಾರ ಜಯಭೇರಿ

ಮಂಡೇಲಾರ ಉತ್ತರ ಅಮೆರಿಕಾದ ಭೇಟಿ - ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಕೆನಡಾಕ್ಕೆ ನೀಡಿದ ಭೇಟಿ ಸಫಲವಾಗಿದೆ. ಅಮೆರಿಕಾದ ಅಧ್ಯಕ್ಷ ಬುಶ್ ಮತ್ತು ಕೆನಡಾದ ಅಧ್ಯಕ್ಷರಿಂದ ಮಂಡೇಲಾ ವರ್ಣಭೇಧ ವ್ಯವಸ್ಥೆ ಕಿತ್ತು ಹಾಕುವವರೆಗೆ ಆರ್ಥಿಕ ದಿಗ್ಬಂಧನವನ್ನು ತೆಗೆಯುವುದಿಲ್ಲ ವೆಂಬ ಭರವಸೆ ಪಡೆದಿದ್ದಾರೆ. ನ್ಯೂಯಾರ್ಕ್ ಮತ್ತು ಬೋಸ್ಟನ್‌ಗೆ ಅವರ ಭೇಟಿ ಸ್ಮರಣೀಯವಾಗಿತ್ತು. 'ಹರ್ಷಧ್ವನಿಗಳಿಂದ ವರ್ಣಭೇಧ ವ್ಯವಸ್ಥೆ ಸಾಯುವುದಾದರೆ ನಿನ್ನೆ ಅದು ನ್ಯೂಯಾರ್ಕಿನಲ್ಲಿ ಸತ್ತಿದೆ' ಎಂದು ಪತ್ರಿಕೆಯೊಂದು ಮಂಡೇಲಾರಿಗೆ ಸಿಕ್ಕಿದ ಸ್ವಾಗತದ ಬಗ್ಗೆ ಬರೆಯಿತು. ಸುಮಾರು ಏಳೂವರೆ ಲಕ್ಷ ಜನ ಮಂಡೇಲಾರ ಸ್ವಾಗತದಲ್ಲಿ ಪಾಲ್ಗೊಂಡಿದ್ದರು. 4 ಲಕ್ಷ ಜನ ದಾರಿ ಎರಡೂ ಬದಿ ನಿಂತು ಸ್ವಾಗತಿಸಿದರು. ನಗರ ಭವನದ ಸುತ್ತ ಮುತ್ತ 2 ಲಕ್ಷ ಜನ ಸೇರಿದ್ದರು. ಬೋಸ್ಟನ್‌ನಲ್ಲಿ 2ವರೆ ಲಕ್ಷ ಜನ ಸೇರಿದ್ದರು.

1986 ರಲ್ಲಿ ಮಾಡಿದ ಕಾನೂನು ಪ್ರಕಾರ ಆರ್ಥಿಕ ದಿಗ್ಬಂಧನಗಳನ್ನು ತೆಗೆಯಲು ಹಲವು ಶರತ್ತುಗಳನ್ನು ಪೂರೈಸಬೇಕು. ಆದ್ದರಿಂದ ಅಧ್ಯಕ್ಷ ಬುಶ್‌ರ ಮನಸ್ಸು ಏನೇ ಇರಲಿ. ಆರ್ಥಿಕ ದಿಗ್ಬಂಧನ ತೆಗೆಯುವುದಕ್ಕೆ ಕಾನೂನು ಬದಲಿಸಬೇಕು. ಆದರೆ ಅಮೆರಿಕಾದಲ್ಲಿ ದ. ಆಫ್ರಿಕಾದ ಮೇಲೆ ದಿಗ್ಬಂಧನ ಬರಿಯ ವಿದೇಶ ನೀತಿಯ ಪ್ರಶ್ನೆಯಾಗಿ ಉಳಿದಿಲ್ಲ. ಮಂಡೇಲಾ ಅಮೆರಿಕದ ಕರಿಯ ಜನರ ಐಕ್ಯತೆಯ ಪ್ರತೀಕವಾಗಿ ಹೋಗಿದ್ದಾರೆ - ಅವರ ಎಲ್ಲಾ ಭೇದಗಳನ್ನು ಮರೆತು. ಮುಂದಿನ ಚುನಾವಣೆ ಹತ್ತಿರ ಬರುತ್ತಿರು ವಾಗ ಕರಿಯರ ಭಾವನೆಗಳ ವಿರುದ್ಧ ಹೋಗುವುದು ಬುಶ್‌ಗೆ ಅಸಾಧ್ಯ.

ಲೋಕ ಸಂಚಾರ

ಪೂರ್ವ ಬರ್ಲಿನ್ ವಾಸಿಗಳ ಗೋಳು

★ 'ಜುಲೈ 1 ರ ನಂತರ ನನ್ನ ಬಳಿ ನನ್ನ ಉದ್ಯೋಗ ಇರುತ್ತೋ ಇಲ್ಲವೋ ಗೊತ್ತಿಲ್ಲ. ನನ್ನ ಮನೆ ಸಹ ಇರುತ್ತೋ ಇಲ್ಲವೋ ಗೊತ್ತಿಲ್ಲ".

-45 ವರ್ಷದ ಪೆತ್ರಾ, ಸೋವಿಯತ್ ಪುಸ್ತಕ ಅಂಗಡಿಯ ಉದ್ಯೋಗಿ.

★ "ಈಗ ಇಲ್ಲಿ ಶೀತ ಸಮರ ಇಲ್ಲ. ಅಂತರಿಕ ಸಮರ ಆರಂಭವಾಗಿದೆ. ದುಡ್ಡಿದ್ದವರು ಪಶ್ಚಿಮದವರು ಒಳ್ಳೆಯ ರೆಸ್ಟೋರಾಂಟುಗಳಲ್ಲಿ ತಿನ್ನುತ್ತಿರುತ್ತಾರೆ. ನಾವು ಪೂರ್ವದವರು ದಾರಿ ಬದಿಯ ಅಂಗಡಿ ಗಳಲ್ಲಿ ತಿನ್ನಬೇಕು."

ಪ್ರೊಫೆಸರ್ ಕ್ಲಾಸ್ ಕೈರ್ಪೆ. ಬರ್ಲಿನ್ ವಿಶ್ವವಿದ್ಯಾಲಯ '

'ನಾನು ಒಂದು ಮನೆ ಕೊಳ್ಳಲು ಭಾರಿ ಸಾಲ ಮಾಡಿಬಿಟ್ಟೆ. ಅದನ್ನು ತೀರಿಸಲು ಆಗುತ್ತೋ ಇಲ್ಲವೋ ಗೊತ್ತಿಲ್ಲ. ಆದರೆ ಮನೆ ಬೆಲೆ ವಿಪರೀತ ಏರುವ ಮೊದಲೇ ಕೊಂಡರೆ ಒಳ್ಳೆಯದು ಅಂತ ಈ ತೊಡಕಿಗೆ ಸಿಕ್ಕಿ ಹಾಕಿಕೊಂಡೆ"

-ಸ್ಕಾರಿನ್ ನಿಕರ್‌ಲಿಂಗ್ - ಹ್ಯಾಟು ಅಂಗಡಿಯೊಂದರಲ್ಲಿ ಉದ್ಯೋಗಿ.

' 'ನಾವು ಸಮಾಜವಾದದ ಪರಾಭವಕ್ಕಾಗಿ ಹೋರಾಡಲಿಲ್ಲ. ಸಮಾಜವಾದದಲ್ಲಿ ಸುಧಾರಣೆಗಾಗಿ ಹೋರಾಡಿದೆವು"

-ವಿನ್ನಿ ಕೊನಿಂಗ್ ಟೆಲಿವಿಜನ್ ಪತ್ರಕರ್ತೆ

ಇದು ಜುಲೈ 4 ರಂದು ಆರ್ಥಿಕ ಸಮಾಗಮಸಾಧಿಸಿದ ಪೂರ್ವ ಜರ್ಮನಿಯ ರಾಜಧಾನಿ ಬರ್ಲಿನ್ ವಾಸಿಗಳ ಗೋಳು. ಜುಲೈ 4 ರ ನಂತರ ಮೊದಲು 4000 ಪೂ ಜರ್ಮನ್ ಮಾರ್ಕ್ ಬಿಟ್ಟರೆ ಉಳಿದ ಹಣ ಅರ್ಧಬೆಲೆ ಸಿಗುತ್ತದೆ. ಪಶ್ಚಿಮ ಜರ್ಮನಿಯ ಮಾರ್ಕ್‌ಗಳಲ್ಲಿ, ಆದರೆ ದೊಡ್ಡ ಮೊತ್ತದ ಉಳಿತಾಯಕ್ಕೆ ವಿಮೆ ಸಿಗಲ್ಲ ಎಂಬ ವದಂತಿಗಳಿಂದ ಪೂರ್ವ ಜರ್ಮನರು ಗಾಬರಿಯಾಗಿದ್ದಾರೆ.

ಕ್ಯೂಬಾದಲ್ಲಿ ಸಮಾಜವಾದ ಬಲಪಡಿಸಲು ಕ್ರಮ

ಕ್ಯೂಬಾದಲ್ಲಿ ಸಮಾಜವಾದದಲ್ಲಿ ಇನ್ನೂ ಸುಧಾರಣೆ ಬೇಕು ಎಂದು ಜನರ ಅಭಿಪ್ರಾಯ ಕೇಳಲು ಅಲ್ಲಿನ ಕಮ್ಯುನಿಸ್ಟ್ ಪಕ್ಷ ನಿರ್ಧರಿಸಿದೆ. ವ್ಯವಸ್ಥೆಯಲ್ಲಿನ ದೋಷಗಳನ್ನು ನ್ಯೂನತೆಗಳನ್ನು ಸರಿಪಡಿಸುವುದು ಈ ಪ್ರಚಾರದ ಉದ್ದೇಶ. ಸಾರ್ವತ್ರಿಕ ಚರ್ಚೆಗಾಗಿ ಪಕ್ಷ ಒಂದು ದಾಸ್ತಾವೇಜು ಸಿದ್ಧಪಡಿಸಿದೆ. "ನೀವು ಏನು ಕೊಡಬಹುದು? ನಿಮ್ಮ ಅಭಿಪ್ರಾಯ" ಎಂಬ ಭಾರೀ ಬ್ಯಾನರುಗಳು ಫಲಕಗಳಿಂದ ಸಾರ್ವಜನಿಕರನ್ನು ಸಂಪರ್ಕಿಸಲು ಪಕ್ಷ ನಿರ್ಧರಿಸಿದೆ. "ನಾವು ನಮ್ಮ ಸಮಾಜವಾದವನ್ನು ದೋಷಮುಕ್ತ ಮಾಡಲು ನಿರ್ಧರಿಸಿದ್ದೇವೆ" ಎಂದು ಒಬ್ಬರು ಪ್ರಮುಖ ಕ್ಯೂಬನ್ ನಾಯಕರು ಹೇಳಿದ್ದಾರೆ.

ಪಾಕಿಸ್ಥಾನದಲ್ಲಿ ಮಿಲಿಟರಿ ಆಡಳಿತದ ಅಪಾಯ

ಸಿಂಧ್ ಗಲಭೆ ಪ್ರಕ್ಷೋಭೆ ಮುಂದುವರಿಯುತ್ತಿದ್ದು ಬೆನೆಜಿರ್ ಸರ್ಕಾರ ಮತ್ತು ಅಧ್ಯಕ್ಷರು ಮಿಲಿಟರಿ ಜನರಲ್ ಗಳ ನಡುವೆ ಬೆನೆಜಿರ್ ಸರ್ಕಾರ ವಜಾ ಮಾಡಿ ಮಿಲಿಟರಿ ಆಡಳಿತ ಹೇರಬಹುದು ಎಂಬ ವದಂತಿ ಹರಡಿದೆ.

ಈ ನಡುವೆ ಇಸ್ಲಾಮಿಕ್ ಕಾನೂನನ್ನು ಮಂಡಿಸುವ ಮೂಲಕ ಬೆನಜಿರ್ ಸರ್ಕಾರವನ್ನು ಧಾರ್ಮಿಕರ ಪೇಚಿಗೆ ಸಿಕ್ಕಿಸಲು ಪ್ರಯತ್ನಿಸುತ್ತಿದೆ.



ಅರಣ್ಯ ಇಲಾಖೆಯ ದಿನಗೂಲಿ ನೌಕರರ ಸಂಘದ ಸಭೆಗಳು

ಅರಣ್ಯ ಇಲಾಖೆಯ ದಿನಗೂಲಿ ನೌಕರರ ಸಂಘವು ಅನೇಕ ಹೋರಾಟಗಳನ್ನು ನಡೆಸಿ. ನಂತರದಲ್ಲಿ ಆದ ಒಪ್ಪಂದಗಳನ್ನು ಎಲ್ಲಾ ನೌಕರರಿಗೂ ತಿಳಿಯಪಡಿಸಲು. ಸಂಘವು ಅನೇಕ ಸ್ಥಳಗಳಲ್ಲಿ ಸರ್ವ ಸದಸ್ಯರ ಸಭೆಯನ್ನು ನಡೆಸಿದವು. ಈ ಸಭೆಗಳಲ್ಲಿ ಸಂಘದ ಬೆಳವಣಿಗೆಗಳನ್ನು ತಿಳಿಸಿ. ಸಂಘವನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕೆಂದು ಸಂಘದ ಜಿಲ್ಲಾಧ್ಯಕ್ಷರಾದ ಸಿ.ರಘುನಾಥ್. ಹಾಗೂ ಪ್ರಧಾನ ಕಾರ್ಯದರ್ಶಿಗಳಾದ ಹೆಚ್. ಮಲ್ಲಿಕಾರ್ಜುನರವರು ಕರೆ ನೀಡಿದರು.

ಸಂಡೂರು

ದಿ. 2-9-90 ರಂದು ಸಂಡೂರಿನಲ್ಲಿ ದಿನಗೂಲಿ ನೌಕರರ ಸಭೆಯು ಜರುಗಿತು. ಈ ಸಭೆಯಲ್ಲಿ ಖಾದರ್‌ರವರನ್ನು ಸಂಚಾಲಕರನ್ನಾಗಿ ಆಯ್ಕೆ ಮಾಡಲಾಯಿತು.

ಕೂಡ್ಲಿಗಿ

ಕೂಡ್ಲಿಗಿಯಲ್ಲಿ 12-6-90 ರಂದು ಸಂಜೆ ಜರುಗಿದ ಸಭೆಯಲ್ಲಿ ಸುತ್ತ ಮುತ್ತಲು ಗ್ರಾಮಗಳಿಂದ ಸುಮಾರು 100 ಕ್ಕೂ ಹೆಚ್ಚು ನೌಕರರು ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಿದರು. ಈ ಸಭೆಯಲ್ಲಿ ತಾಲ್ಲೂಕು ಕಮಿಟಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ. ಜಂಬಣ್ಣ. ಉಪಾಧ್ಯಕ್ಷರಾಗಿ. ಪ್ರಭ್ಕೀಶ. ಕಾರ್ಯದರ್ಶಿಯಾಗಿ ಕೆ. ಸಣ್ಣವೀರಣ್ಣ. ಸಹಾಯಕ ಕಾರ್ಯದರ್ಶಿಯಾಗಿ ಮೊಗಪ್ಪ ಖಜಾಂಚಿಯಾಗಿ ಖಾದರ್ ಬಾಷ್. ಹಾಗೂ 6 ಜನರ ಸಮಿತಿಯನ್ನು ರಚಿಸಲಾಯಿತು.

ಹರಪನ ಹಳ್ಳಿ

ದಿ. 13-6-90 ರಂದು ಜರುಗಿದ ಸರ್ವ ಸದಸ್ಯರ ಸಭೆಯಲ್ಲಿ ಈ ಕೆಳಕಂಡ ಸಮಿತಿಗಳನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಗುಲಾಬ್ ಜಾನ್‌ಸಾಬ್. ಉಪಾಧ್ಯಕ್ಷರಾಗಿ ರೇವಣ್ಣಗೌಡ. ಕಾರ್ಯದರ್ಶಿಯಾಗಿ ಜಂಬಣ್ಣ. ಸಹ ಕಾರ್ಯದರ್ಶಿಯಾಗಿ ಚಂದ್ರಾ ನಾಯ್ಕ. ಖಜಾಂಚಿ ರಾಮಕೃಷ್ಣ ಹಾಗೂ 4 ಜನರನ್ನು ಸಮಿತಿಯ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ಅಲ್ಲದೆ. ಜಿಲ್ಲಾ ಸಮಿತಿಯ ಪ್ರತಿನಿಧಿಯಾಗಿ ಸಾಮಾಜಿಕ ಅರಣ್ಯ ವಿಭಾಗದಿಂದ ತಿಮ್ಮಪ್ಪ ಮತ್ತು ಪ್ರಾದೇಶಿಕ ಅರಣ್ಯ ವಿಭಾಗದಿಂದ ರಾಮಕೃಷ್ಣರವರನ್ನು ಆಯ್ಕೆ ಮಾಡಲಾಯಿತು.

ಹೂವಿನ ಹಡಗಲಿ

14-6-90ರಂದು ನಡೆದ ಸಭೆಯನ್ನು ಎಲ್ಲಾ ನೌಕರರು ಹಾಜರಿದ್ದು ಯಶಸ್ವಿಯಾಗಿ ನಡೆಸಿಕೊಟ್ಟರು. ತಾಲ್ಲೂಕು ಕಮಿಟಿಯನ್ನು ಒಮ್ಮತದಿಂದ ಈ ಸಭೆಯಲ್ಲಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಬಸವರಾಜಪ್ಪ, ಉಪಾಧ್ಯಕ್ಷರಾಗಿ ನವಲಗುಂದ ಇಮಾಮ್‌ಸಾಬ್. ಕಾರ್ಯದರ್ಶಿಯಗಿ ವೀರಭದ್ರಗೌಡ, ಸಹಕಾರ್ಯದರ್ಶಿ ಶಿವನಂದಪ್ಪ, ಖಜಾಂಚಿ ಈರಣ್ಣ ಮತ್ತು 11ಜನರ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಲ್ಲದೆ ಜಿಲ್ಲಾ ಪ್ರತಿನಿಧಿಗಳಾಗಿ ಇಟಗಿ ಕೊಟ್ರೆಶಪ್ಪ, ಪಕ್ಕಿರಪ್ಪರವರನ್ನು ಆಯ್ಕೆ ಮಾಡಲಾಯಿತು.

ಸಿರುಗುಪ್ಪ

17-6-90 ರಂದು ಸಿರುಗುಪ್ಪ ತಾಲ್ಲೂಕಿನಲ್ಲಿ ನಡೆದ ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಸಿ.ರಘುನಾಥರವರು ಮಾತನಾಡಿ ಸಂಘದ ಗುರಿ ಹಾಗೂ ಸಾಧನೆಗಳ ಬಗ್ಗೆ ವಿವರಿಸಿದರು.

ಹೊ ಚಿ ಮಿನ್ಹ್ - ಸ್ಫೂರ್ತಿಯ ಚಿಲುಮೆ

ವಿಶ್ವ ನಾಯಕ - ವಿಯಟ್ನಾಂ ಜನತೆಯ ಪಿತಾಮಹ ಹೊ ಚಿ ಮಿನ್ಹ್‌ರ ಶತಾಬ್ದಿಯನ್ನು ಧಾರವಾಡದಲ್ಲಿ ಆಚರಿಸಲಾಯಿತು. ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಸಮುದಾಯದ ಸಿ.ಆರ್. ಭಟ್ ಅಧ್ಯಕ್ಷತೆ ವಹಿಸಿದ್ದರು. ಕಾಂ.ಎ.ಎಸ್. ಹಳೆಕಟ್ಟಿಯವರು ಸ್ವಾಗತ ಭಾಷಣ ಹಾಗೂ ಪ್ರಾಸ್ತಾವಿಕ ಭಾಷಣ ಮಾಡಿದರು. ಕಾರ್ಮಿಕ ನಾಯಕ ಪ್ರೊ॥ ಕೆ.ಎಸ್. ಶರ್ಮಾ. ಉಪನ್ಯಾಸಕರಾಗಿ. ಡಾ॥ ವಿ.ಎಸ್. ದೇಶಪಾಂಡೆ. ಎಸ್.ಎಫ್.ಐ. ನ ಕಾಂ। ಸುಶೀಲ ಕಾಂಡೇಲ. ಎಲ್.ಐ.ಸಿ.ಯ ಕಾಂ. ಎಂ. ಕೆ. ದೇಶಪಾಡೆ. ಕಾಂ. ಸದಾನಂದ ಇನ್ನೂ ಮುಂತಾದವರು ಭಾಗವಹಿಸಿದ್ದ ಈ ಕಾರ್ಯಕ್ರಮವು ಕಾಂ. ಹೊ ಚಿ ಮಿನ್ಹ್‌ರವರ ಕ್ರಾಂತಿಕಾರಿ ಜೀವನದ ಹಲವು ಮುಖಗಳನ್ನು ಪರಿಚಯಿಸುವಲ್ಲಿ ಹಾಗೂ ಅವರ ಸರಳತೆಯನ್ನು ವಿವರಿಸಿ ಅವರಂತೆ ಬದುಕುವ ರೀತಿಯನ್ನು ಸಭಿಕರಿಗೆ ಮನದಟ್ಟು ಮಾಡಿತು.

ಕೈಗಾರಿಕಾ ನೀತಿ ಮತ್ತು ಶಿಕ್ಷಣ ಕುರಿತ ವಿಚಾರ ಸಂಕಿರಣ

ಭಾರತದಲ್ಲಿ ಕೈಗಾರಿಕಾ ನೀತಿ ಮತ್ತು ಶಿಕ್ಷಣ ತರಬೇತಿಯ ಕುರಿತಾದ ವಿಚಾರ ಸಂಕಿರಣವೊಂದು ದಿನಾಂಕ 19-6-90 ರಂದು ಹುಬ್ಬಳ್ಳಿ ನಗರದ ಮುನಿಸಿಪಲ್ ಎಂಪ್ಲಾಯಿಸ್ ಹಾಲ್‌ನಲ್ಲಿ ಜರುಗಿತು. ಎಸ್‌ಎಫ್‌ಐ ಧಾರವಾಡ ಜಿಲ್ಲಾ ಸಮಿತಿ ಹಾಗೂ ಐ.ಟಿ.ಐ. ವಿದ್ಯಾರ್ಥಿಗಳ ಸಮಿತಿ ಜಂಟಿಯಾಗಿ ಸಂಘಟಿಸಿದ ಈ ವಿಚಾರ ಸಂಕಿರಣವನ್ನು. ಖ್ಯಾತ ಉದ್ದಿಮೆದಾರರಾದ ಮತ್ತು ಲಯನ್ಸ್ ಕ್ಲಬ್ ಅಧ್ಯಕ್ಷರಾದ ಶ್ರೀ ಪ್ರಕಾಶ್ ಬಂಗಿಕಾಯಿ ಉದ್ಘಾಟಿಸಿ ಇಂತಹ ವಿಚಾರ ಸಂಕಿರಣಗಳ ಮಹತ್ವವನ್ನು ವಿವರಿಸಿ. ಇಂತಹವುಗಳನ್ನು ಸರಕಾರ ನಡೆಸಬೇಕಾಗಿತ್ತು. ಆದರೆ. ಇದನ್ನು ವಿದ್ಯಾರ್ಥಿಗಳೆ ನಡೆಸುತ್ತಿರುವುದು ಸ್ವಾಗತಾರ್ಹ ಎಂದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕೈಗಾರಿಕಾ ಕೇಂದ್ರದ ಶ್ರೀ ಕೈಲ ಕೊಲ್ಹಾರವರು ಹಾಜರಿದ್ದು ಸರಕಾರದ ಸೌಲಭ್ಯಗಳನ್ನು ವಿವರಿಸಿದರು. ಇನ್ನೋರ್ವ ಮುಖ್ಯ ಅತಿಥಿಯಾಗಿ ಐಟಿಐನ ಪ್ರಾಚಾರ್ಯರಾದ ಶ್ರೀ ಮುದ್ಗಣನವರು ಹಾಜರಿದ್ದರು.

ಪ್ರಸ್ತುತ ಕೈಗಾರಿಕಾ ನೀತಿ ಮತ್ತು ಶಿಕ್ಷಣ ಕುರಿತಾಗಿ ಪ್ರಬಂಧವನ್ನು ಎಸ್‌ಎಫ್‌ಐನ ರಾಜ್ಯ ಸಮಿತಿ ಕಾರ್ಯದರ್ಶಿಯಾದ ಕಾಂ. ಎಸ್.ವೈ. ಗುರುಶಾಂತ್ ಮಂಡಿಸಿ. ಉತ್ಪಾದನೆ ಆಧಾರಿತ ಕೈಗಾರಿಕೆಗಳಲ್ಲಿ ಹೆಚ್ಚುತ್ತಿರುವ ತಾಂತ್ರಿಕ ನಿರುದ್ಯೋಗ ಮತ್ತು ನಮ್ಮಲ್ಲಿ ಅನುಸರಿಸುತ್ತಿರುವ ಬಿಲ್ ಡೆಲ್ (ಸಬ್ ಮಾಡಲ್) ನ ಪದ್ಧತಿ ಹೋಗಬೇಕು ಎಂದರು. ತರಬೇತಿ ಪಡೆದವರಿಗೆ ಕಡ್ಡಾಯ ಉದ್ಯೋಗ ಸಿಗುವಂತಾಗಲು 1961 ರ ಅಪ್ರೆಂಟಿಸ್ ಆಕ್ಟ್ ಕಾಯ್ದೆಗೆ ತಿದ್ದುಪಡಿ ಆಗಬೇಕು ಎಂದು ಅಭಿಪ್ರಾಯಪಟ್ಟರು.

ಆರಂಭದಲ್ಲಿ ಜಿಲ್ಲಾ ಕಾರ್ಯದರ್ಶಿಯಾದ ಬಸವರಾಜ ಭಜಂತ್ರಿ ಸ್ವಾಗತಿಸಿ. ಪ್ರಸ್ತಾವಿಕ ಭಾಷಣ ಮಾಡಿದರು. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾಂ. ಸುರೇಶ್ ಕಾಂಡೇಲ ಅಧ್ಯಕ್ಷತೆ ವಹಿಸಿದ್ದರು. ಕೊನೆಗೆ ಕಾಂ. ಸೋಮಶೇಖರ ಮಠ ವಂದಿಸಿದರು.

ಕೋಮುವಾದಿಗಳ ಆಟ ಸಾಗದಂತೆ ಮಾಡೋಣ

ಪುಟ 1 ರಿಂದ

ಬಳಸಿಕೊಳ್ಳುತ್ತಾರೆ.

ಇವೆಲ್ಲದಕ್ಕಿಂತ ಗೋಸುಂಬೆತನದ ಸಂಗತಿಯೆಂದರೆ ರಾಜೀವ ಗಾಂಧಿಯ ಅಬ್ಬರ. ಈಗ ಭಾರತದರ್ಶನಕ್ಕೆ ಹೊರಟಿರುವ ಆತ ಹೆಚ್ಚುತ್ತಿರುವ ಕೋಮು ಭಾವೋದ್ರೇಕಗಳಿಗೆ ರಾಷ್ಟ್ರೀಯ ರಂಗ ಸರಕಾರ ಕಾರಣ ಎಂದು ಪ್ರಚಾರ ಮಾಡುತ್ತಿದ್ದಾರೆ. ಲೋಕಸಭಾ ಚುನಾವಣೆಗಳ ಸ್ವಲ್ಪ ಮುಂಚೆ ರಾಮ ದೇವಸ್ಥಾನವೆಂಬುದರ 'ಶಿಲಾನ್ಯಾಸ' ಮಾಡಲು ವಿಶ್ವ ಹಿಂದೂ ಪರಿಷತ್ತಿಗೆ ಕಳ್ಳತನದಿಂದ ಅವಕಾಶ ನೀಡಿದ ಈ ದೀರ್ಘಕೋಮು ವೈಷಮ್ಯದ ಬೀಜ ಬಿತ್ತಿದ ರಾಜೀವ ಗಾಂಧಿ ಯಾವ ಬಾಯಿಂದ ಈ ಮಾತನ್ನಾಡುತ್ತಾರೋ? ಈ ವ್ಯಾಪಾರದಲ್ಲಿ ಆತ ಹಿಂದೂಗಳ ಮತ್ತು ಮುಸ್ಲಿಮರ ಇಬ್ಬರ ವಿಶ್ವಾಸವನ್ನು ಕಳಕೊಂಡ. ರಾಜೀವ ಸರಕಾರ ಬಿತ್ತಿದ ಬೀಜ ಈಗ ಮರವಾಗಿ ಬೆಳೆದಿದೆ. ಅದರ ದುಷ್ಫಲವನ್ನು ರಾಷ್ಟ್ರೀಯ ರಂಗ ಸರಕಾರ ಉಣ್ಣಬೇಕಾಗಿದೆ.

ಆದರೂ ಕಳೆದ ಐದು ವರ್ಷಗಳ ರಾಜೀವ ಸರಕಾರದ ದಾಖಲೆಗಿಂತ ಆರು ತಿಂಗಳ ರಾಷ್ಟ್ರೀಯ ರಂಗ ಸರಕಾರದ ದಾಖಲೆ ಎಷ್ಟೋ ಉತ್ತಮ.

ಈಗಲೂ ಈ ವಿವಾದದ ಮೇಲೆ ಕೋಮುದಂಗೆಗಳು ಭುಗಿಲೆನ್ನದಂತೆ ತಡೆಯಲು ರಾಷ್ಟ್ರೀಯ ರಂಗ ಸರಕಾರಕ್ಕೆ ಸಾಧ್ಯವಾಗಿದೆ. ದ್ವಾರಕಾಪೀಠದ ಶಂಕರಾಚಾರ್ಯರನ್ನು ಕಳಿಸಿ ಈ ವಿವಾದವನ್ನು ಕೆದಕುವ ಕಾಂಗ್ರೆಸ್-ಪ್ರೋತ್ಸಾಹಿತ ಪ್ರಯತ್ನವನ್ನು ದೃಢವಾಗಿ ಎದುರಿಸಿ ವಿಫಲಗೊಳಿಸಲು ಸಾಧ್ಯವಾಯಿತು. ನ್ಯಾಯಾಲಯದ ತೀರ್ಪಿನ ಮೊದಲು, ಅಥವಾ ಅದನ್ನು ಉಲ್ಲಂಘಿಸಿ ಮುಂದೆಯೂ ಯಾರಾದರೂ ಏನಾದರೂ ಮಾಡದಂತೆ ಇದು ಎಚ್ಚರಿಕೆ ನೀಡಿತು. ಇದರ ಕೀರ್ತಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್‌ರಿಗೆ ಸಲ್ಲುತ್ತದೆ.

ಜಾತ್ಯಾತೀತತೆಯನ್ನು ಎತ್ತಿಹಿಡಿಯುವ ತನ್ನ ದೃಢನಿರ್ಧಾರವನ್ನು ತೋರಿಸಿಕೊಡುವ ಒಂದು ಸರಕಾರ ದುಷ್ಟ ಅಪಾಯಕಾರೀ "ಧರ್ಮಯುದ್ಧ"ದ ಭಾವೀ ಸೈನಿಕರನ್ನು ತಡೆಯಲು ಸಮರ್ಥವಾಗಬಲ್ಲದು. ಆಕ್ರಮಣಕಾರೀ ಕೋಮುವಾದಿಶಕ್ತಿಗಳು ಹಿಂದೆ ಸರಿಯುವಂತೆ ಮಾಡಬೇಕಾದರೆ ದೇಶದ ಪ್ರಜಾಪ್ರಭುತ್ವ ರಾಜಕೀಯ ಚೌಕಟ್ಟಿನ ಜಾತ್ಯತೀತ ಆದರ್ಶಗಳ ರಕ್ಷಣೆ ಅಗತ್ಯ ಎಂದು ಸಾರ್ವಜನಿಕ ಅಭಿಪ್ರಾಯ ನಿರ್ಮಾಣಗೊಳ್ಳಬೇಕು. ಇದನ್ನು ಸಾಧಿಸಲು ಎಲ್ಲಾ ಜಾತ್ಯತೀತ, ಪ್ರಜಾಪ್ರಭುತ್ವವಾದಿ, ದೇಶಪ್ರೇಮಿಶಕ್ತಿಗಳು ಮುಂದಾಗಬೇಕು.

ಹಿಂದೂ ಕೋಮಿನ ಬಹುಪಾಲು ಜನ ಜಾತ್ಯತೀತ ಮನೋಭಾವದವರು - ಕೇವಲ ವಿಚಾರದಲ್ಲಷ್ಟೇ ಅಲ್ಲ, ಆಚರಣೆಯಲ್ಲಿ ಕೂಡಾ. ನಮ್ಮ ಹಳ್ಳಿ ಪಟ್ಟಣಗಳ ಜನಸಾಮಾನ್ಯರು, ತಮ್ಮ ಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ ಬೆವರು ಸುರಿಸಿ ಅನ್ನ ಸಂಪಾದಿಸಬೇಕಾದ ಗಂಡಸರು, ಹೆಂಗಸರು ತಮ್ಮ ಉಳಿವಿನ ದಿನ ನಿತ್ಯದ ಹೋರಾಟದಲ್ಲೇ ತೊಡಗಿರುವವರು ಅವರು ಜಾತ್ಯತೀತ ಗಂಡಸರು. ಜಾತ್ಯತೀತ ಹೆಂಗಸರು. ಅವರೇ ದೇಶಪ್ರೇಮಿಗಳು, ಪ್ರಜಾಪ್ರಭುತ್ವವಾದಿಗಳು. ಈ ದೇಶದ ಜಾತ್ಯತೀತ ಮೌಲ್ಯಗಳನ್ನು ರಕ್ಷಿಸಬೇಕಾಗಿರುವುದು ಇಂತಹ ಮಹಿಳೆಯರು, ಪುರುಷರೊಂದಿಗೇ ಸೇರಿಕೊಂಡು.

ಪಿ.ಡಿ. ಸಂಪಾದಕೀಯ

"ಕಮ್ಯೂನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ"

ದೇಶವನ್ನು ಕ್ರಾಂತಿಯತ್ತ ನಡೆಸುವ ಮಹತ್ವದ ಕೆಲಸಕ್ಕಾಗಿ ನಮ್ಮ ಸಂಗಾತಿಗಳು ಕಮ್ಯೂನಿಸ್ಟ್ ಪಕ್ಷದತ್ತ ಸೆಳೆಯಲ್ಪಟ್ಟಿದ್ದಾರೆ. ಒಬ್ಬೊಬ್ಬ ಸಂಗಾತಿಗಳದು ಒಂದೊಂದು ವಿಶಿಷ್ಟ ಅನುಭವ. ನೀವು ಕಮ್ಯೂನಿಸ್ಟ್ ಚಳುವಳಿಯತ್ತ ಹಾಕಿದ ಹೆಜ್ಜೆಯನ್ನು 2/3 ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

ಉತ್ತಮವಾದುದನ್ನು ಆರಿಸಿ ಪ್ರಕಟಿಸಲಾಗುತ್ತದೆ.

ಕೋರಿಕೆ: ಬರೆಯಲು ಸಾಧ್ಯವಿಲ್ಲದ ಹಿರಿಯ-ಕಿರಿಯ ಸಂಗಾತಿಗಳ ರೋಚಕ ಅನುಭವವನ್ನು ಬರೆಯಬಲ್ಲ ಸಂಗಾತಿಗಳು ಬರೆದು ಕಳುಹಿಸಬಹುದು. ಈ ವಿಶೇಷ ಪ್ರಯತ್ನಕ್ಕಾಗಿ ಬರೆದು ಕಳುಹಿಸಿದ ಸಂಗಾತಿಗಳಿಗೆ 3 ತಿಂಗಳ/ 6 ತಿಂಗಳ ಐಕ್ಯರಂಗ ಉಚಿತ.

ನಿಮ್ಮ ಪತ್ರಿಕೆ 'ಐಕ್ಯರಂಗ' ದಲ್ಲಿ ಹೊಸ ಶೀರ್ಷಿಕೆಗಳು. ಓದುಗರಿಗೆ ವಿಪುಲ ಅವಕಾಶ ನೀಡುವ ಪುಟಗಳು. ಎಲ್ಲಾ ಸಂಗಾತಿಗಳೂ ಉತ್ಸಾಹದಿಂದ ಪಾಲ್ಗೊಳ್ಳುವ ಅವಕಾಶ.

ಮುಂದಿನ ವಾರ : ಕಾಂ. ಸೂರಿಯವರ 'ಹೋರಾಟದ ಬದುಕು'

ಸಿ.ಪಿ.ಐ.(ಎಂ)–ಸಿ.ಪಿ.ಐ ಪಕ್ಷಗಳ ಜಂಟಿ ಆಶ್ರಯದಲ್ಲಿ ಕೋಮುವಾದ ಮತ್ತು ಪ್ರತ್ಯೇಕತಾವಾದದ ವಿರುದ್ಧ ರಾಜ್ಯ ಮಟ್ಟದ ಸಮಾವೇಶ

ದಿನಾಂಕ: 8-7-1990 ಭಾನುವಾರ ಸಂಜೆ 4 ಗಂಟೆಗೆ

ಸ್ಥಳ: ಸೆನೆಟ್ ಹಾಲ್ (ಸೆಂಟ್ರಲ್ ಕಾಲೇಜ್) ಬೆಂಗಳೂರು

ಭಾಗವಹಿಸುವವರು:

ಸರ್ವಶ್ರೀ ಆಸ್ಕರ್ ಫರ್ನಾಂಡಿಸ್, ಅಧ್ಯಕ್ಷರು, ಕೆ.ಪಿ.ಸಿ.ಸಿ(ಐ), ಸಿ.ಕೆ. ಜಾಫರ್ ಷರೀಫ್, ಎಂ.ಪಿ., ಜನತಾ ದಳದ ನಾಯಕರಾದ ಡಿ.ಬಿ. ಚಂದ್ರೇಗೌಡ, ಎಂ.ಪಿ. ಪ್ರಕಾಶ್, ಮೊಹಿದ್ದೀನ್, ಜನತಾ ಪಕ್ಷದ ನಾಯಕರಾದ ಹೆಚ್.ಡಿ. ದೇವೇಗೌಡ, ಡಾ|| ಬಿ.ಎಂ. ತಿಪ್ಪೇಸ್ವಾಮಿ, ಸಿ.ಪಿ.ಐ ರಾಷ್ಟ್ರೀಯ ಮಂಡಳಿ ಕಾರ್ಯದರ್ಶಿ ಹೋಮಿ ದಾಜಿ, ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಎಂ.ಸಿ. ವೆಂಕಟರಾಮು, ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್, ರಾಜ್ಯ ಸೆಕ್ರೆಟರಿಯೇಟ್ ಸದಸ್ಯರಾದ ಎಸ್. ಸೂರ್ಯನಾರಾಯಣ ರಾವ್ ಹಾಗೂ ಪಿ. ಲಂಕೇಶ್, ಎಸ್.ಕೆ. ಕರೀಂಖಾನ್, ರಂಜಾನ್ ದರ್ಗಾ ಮುಂತಾದವರು.

ಈ ವಾರ

★ ಎಂಟನೇ ಯೋಜನೆಯ ಅಂತ್ಯದಲ್ಲಿ ಇನ್ನೂ ನಿರುದ್ಯೋಗಿಗಳಾಗಿರುವವರ ಸಂಖ್ಯೆ 10ಕೋಟಿ

-ಇಕನಾಮಿಕ್ ಟೈಮ್ಸ್, ಜುಲೈ 1

★ ಉದಾರೀಕರಣದ ಹೆಸರಿನಲ್ಲಿ ಹಣಕಾಸಿನ ನೀತಿಯ ನವದಲ್ಲಿ ಹಿಂದಿನ ಸರ್ಕಾರಗಳು ಕೈಗೊಂಡ ಕ್ರಮಗಳು ವಿದೇಶೀ ಹಿತಗಳಿಗೆ ಅನುಕೂಲವಾಗಿ ಪರಿಣಮಿಸಿದೆಯೆಂಬ ಟೀಕೆ ಕೇಳಿಬರುತ್ತಲೇ ಇದೆ. ಈ ಟೀಕೆಯಲ್ಲಿ ಸತ್ಯವಿಲ್ಲದೆ ಇಲ್ಲ.......ಪ್ರಸ್ತುತ ಸರಕಾರ ಈ ನೀತಿಯನ್ನೇ ಇನ್ನಷ್ಟು ಮುಂದುವರಿಸಿದೆ.

-ಪ್ರಜಾವಾಣಿಯ 'ಆರ್ಥಿಕ ಚಿಂತನ'ಯಲ್ಲಿ, ಜುಲೈ 2

★ ಎಡಪಕ್ಷಗಳು ಬಿಟ್ಟು ಬೇರೆಲ್ಲ ರಾಜಕೀಯ ಪಕ್ಷಗಳೂ (ಬಾಬ್ರಿ ಮಸೀದಿ ರಾಮಜನ್ಮಭೂಮಿ ವಿವಾದದಲ್ಲಿ) ಒಂದು ಸ್ಪಷ್ಟ ನಿಲುವು ತಳೆದಿಲ್ಲ. ರಾಜಕೀಯ ದುರ್ಲಾಭ ಪಡೆಯುವ ಪ್ರಲೋಭನೆಯನ್ನು ತಡೆದುಕೊಳ್ಳುವುದು ಅವಕ್ಕೆ ಆಗಿಲ್ಲ ಎಂಬ ಸಂಗತಿ ಸನ್ನಿವೇಶವನ್ನು ಇನ್ನಷ್ಟು ಹದಗೆಡಿಸಿದೆ.

-ಇಕನಾಮಿಕ್ ಟೈಮ್ಸ್, ಜುಲೈ 2

★ ..ನಮ್ಮ ಶಿಕ್ಷಣ ಒಂದು ಗೊಂದಲಪುರ. ಇದರಲ್ಲಿ "ಗುತ್ತಿಗೆ ಶಿಕ್ಷಕರು"ಎನ್ನುವ ಒಂದು ವರ್ಗ ಸೃಷ್ಟಿಯಾಗಿ ಅದು ಬೆಳೆಯುತ್ತಲೇ ಇರುವ ವಿಚಿತ್ರ ಸನ್ನಿವೇಶ ಶಿಕ್ಷಣ ಕ್ಷೇತ್ರದ ಆಭಾಸಗಳಲ್ಲಿ ಪ್ರಮುಖವಾದುದು. ಪ್ರಾಥಮಿಕ ಶಾಲೆಯಿಂದ ಹಿಡಿದು ಕಾಲೇಜು ಮಟ್ಟದವರೆಗೆ ಕರ್ನಾಟಕದಲ್ಲಿ ಒಟ್ಟು ಹತ್ತು ಸಾವಿರ ಮಂದಿ ಗುತ್ತಿಗೆ ಶಿಕ್ಷಕರಿದ್ದಾರೆ.

- ಪ್ರಜಾವಾಣಿ, ಜುಲೈ 2

★ ಸಾರಿದಾರಿಟಿ ಒಂದು ರಾಜಕೀಯ ಚಳುವಳಿಯಿಂದ ಕೆಲವು ಸಂಕುಚಿತ ವಿಷಯಾಧಾರಿತ ರಾಜಕೀಯ ಪಕ್ಷಗಳಾಗಿ ಅನಿವಾರ್ಯವಾಗಿ ಪರಿವರ್ತನೆಗೊಳ್ಳುವ ಸೂಚನೆಯಂತೆ ಕಾಣುತ್ತದೆ......ಒಂದೊಮ್ಮೆ ಒಂದು ಕೋಟಿಯಿದ್ದ ಸದಸ್ಯತ್ವ ಇನ್ನರ್ಧಕ್ಕೆ ಇಳಿದಿದೆ.

-ಸ್ಟೇಟ್ಸ್‌ಮನ್, ಜುಲೈ 2

★ ಆಧುನೀಕರಣ, ಹೊಸತಂತ್ರಜ್ಞಾನಕ್ಕೆ ಆಹ್ವಾನ ಹಾಗೂ ರಫ್ತು ಆದ್ಯತೆಯ ಹಿನ್ನೆಲೆಯಲ್ಲಿ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತದ್ವಾರ ತೆರೆಯುವ ಸಂಭವ ಉಂಟು. ವಿಶೇಷವಾಗಿ ಈ ಸಂಸ್ಥೆಗಳು ಕೃಷಿಕ್ಷೇತ್ರ ಪ್ರವೇಶ ಮಾಡಿದರೆ ನಾವು ಕಳೆದ ನಲವತ್ತು ವರ್ಷಗಳಲ್ಲಿ ಕಟ್ಟಿ ನಿಲ್ಲಿಸಿದ ಸಹಕಾರಿ ಹಾಲು ಮಹ್ಮನಾರಾದೀತು ಜತೆಗೆ ನಿತ್ಯ ಬಳಕೆ ವಸ್ತುಗಳ ಉತ್ಪಾದನೆ ಕೂಡಾ...........ಕೇಂದ್ರ ಸರ್ಕಾರ ತಾನು ಪ್ರಕಟಿಸಿದ ಹೊಸ ಕೈಗಾರಿಕಾ ನೀತಿಯನ್ನು ಆತುರದಲ್ಲಿ ಮುಂದು ಮಾಡದಿರಲಿ. ವಿವಿಧ ಕ್ಷೇತ್ರಗಳಲ್ಲಿ ಕೇಳಿಬರುವ ಪ್ರತಿಕ್ರಿಯೆಗೆ ಕಿವಿಗೊಡಲಿ. ಅಗತ್ಯವಾದರೆ ಈ ವಿಷಯ ಕುರಿತು ಸಾರ್ವತ್ರಿಕ ಚರ್ಚೆ ನಡೆಯಲಿ.

-ಕನ್ನಡಪ್ರಭ, ಜುಲೈ 3

★ ಬಜೆಟ್ ಅಧಿವೇಶನದ ಕೊನೆಯಲ್ಲಿ ಸಂಸತ್ತಿನಲ್ಲಿ ಮಂಡಿಸಿದ ವಿವಾದಾತ್ಮಕ ಕೈಗಾರಿಕಾ ಧೋರಣೆಗೆ ವಿ.ಪಿ. ಸಿಂಗ್‌ರ ಅನುಮೋದನೆ ಅವರಿಗೇನೂ ಹೆಚ್ಚಿನ ಮರ್ಯಾದೆ ನೀಡಿಲ್ಲ. ದೇಶದ ಪ್ರಧಾನಮಂತ್ರಿಯಾಗಿ ಅವರು ಪ್ರಶ್ನೆ, ವಿವಾದಗಳ ಮಟ್ಟದಲ್ಲಿ ಸ್ಪಂದಿಸಿ ದೇಶವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು.

-ಟೈಮ್ಸ್ ಆಫ್ ಇಂಡಿಯಾ, ಜುಲೈ 3

★ ಸಿ-ಡೋಟನ್ನು ಸುತ್ತುವರಿದಿರುವ ವಿವಾದದ ಪೂರ್ಣಲಾಭ ಪಡೆದು ದೂರ ಸಂಪರ್ಕಾದ್ಯಮೆಯ ಬಹುರಾಷ್ಟ್ರೀಯ ಕಂಪನಿಗಳ ಸಿ-ಡೋಟ್‌ನ ರಫ್ತು ಆರ್ಡರುಗಳಿಗೆ ಹವಣಿಸುತ್ತಿದ್ದಾರೆ.......ಇದನ್ನು ತಡೆಯಲು ಭಾರತ ಸರ್ಕಾರ ಏನೂ ಮಾಡುತ್ತಿಲ್ಲ. ಎಂಬುದು ಪಿತ್ರೋಡ ಬೇಸರ. ಪ್ಯಾರಿಸ್‌ನಲ್ಲಿರುವ ಫ್ರಾನ್ಸಿನ ಅಲ್ಕಾಟೆಲ್ ಕಂಪನಿ ಒಂದು ಜರ್ಮನಿಯ ಸಂಸ್ಥೆಯ ಮೂಲಕ ಭಾರತ ಸರ್ಕಾರದ ಮನವೊಲಿಸಲು ಬಿರುಸಿನ ದಾಳಿ ವಿಸ್ತರಿಸಿದೆಯೆಂದು ಪಿತ್ರೋಡ ಹೇಳುತ್ತಾರೆ.

-ಟೈಮ್ಸ್‌ನಲ್ಲಿ ರಾಜೀವ್ ಶಾಸ್ತ್ರಿ, ಜುಲೈ 4

ಪುಟ 1 ರಿಂದ

ಇ.ಎಂ.ಎಸ್. ಪ್ರಶ್ನೋತ್ತರ

ಶಾಹೀ ರಾಷ್ಟ್ರಗಳಲ್ಲಿ ಈಗ ಜಾರಿಮಾಡುತ್ತಿರುವ ಸುಧಾರಣೆಗಳಿಂದಾಗಿ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲಿಕ್ಕಾಗಿಯೂ ಹೋರಾಟಗಳು ನಡೆಯದಿರುವುದಿಲ್ಲ. ಹೀಗೆ ಸಮಾಜವಾದವನ್ನು ರಕ್ಷಿಸಲೂ, ಬಂಡವಾಳಶಾಹೀ ರಾಷ್ಟ್ರಗಳಲ್ಲಿ ಸಮಾಜವಾದವನ್ನು ಸ್ಥಾಪಿಸಲಿಕ್ಕಾಗಿಯೂ ಇಡುವ ಹೆಜ್ಜೆಗಳು ಬಲಗೊಳ್ಳುತ್ತವೆ.

ಎರಡನೇ ಪ್ರಶ್ನೆಯ ಕರ್ತೃ ತನ್ನ ಪ್ರಶ್ನೆಯಲ್ಲಿ ಎತ್ತಿರುವುದು ಈ ಪ್ರಕ್ರಿಯೆಯ ತಪ್ಪಿಸಲಾಗದ ಹಿಂದೇಟುಗಳ ಕುರಿತಾಗಿದೆ. ಪ್ರಪಂಚದ ಯಾವುದೇ ಸಮಾಜದಲ್ಲಿಯೂ ವಿರೋಧಿ ಶಕ್ತಿಗಳ ನಡುವೆ ತಿಕ್ಕಾಟಗಳು ನಡೆಯುತ್ತವೆ. ಇಂದಿನ ಸೋವಿಯತ್ ಒಕ್ಕೂಟದಲ್ಲಿ, ಅಲ್ಲಿಯ ಪಕ್ಷದ ನಾಯಕತ್ವವೆ ಬೊಟ್ಟು ಮಾಡಿ ತೋರಿಸಿಕೊಡುವಂತೆ, ಯಥಾಸ್ಥಿತಿ ವಾದಿಗಳು, ತೀವ್ರವಾದಿಗಳು ಎಂಬ ಎರಡು ವಿಭಾಗಗಳನ್ನು ಇದಿರಿಸಿಕೊಂಡು ಅಲ್ಲಿಯ ಪಕ್ಷ ಕಾರ್ಯವೆಸಗುತ್ತಿದೆ. ಸಮಾಜವಾದೀ ರಾಷ್ಟ್ರಗಳಲ್ಲಿ ಯಾವ ಸಮಸ್ಯೆಗಳೂ ಇಲ್ಲ ಎಂಬ ಅನಿಸಿಕೆ ಹರಡಲು ಕಾರಣ ಸಮಾಜವಾದಿ ಸಮಾಜಗಳು, ಮೇಲೆ ಹೇಳಿದ ವೈರುಧ್ಯಗಳೂ ತಿಕ್ಕಾಟಗಳೂ ಇಲ್ಲದ ವ್ಯವಸ್ಥೆಯಾಗಿವೆ ಮತ್ತು ವ್ಯವಸ್ಥೆಯಾಗಿರಬೇಕು ಎಂಬ ಕಲ್ಪನೆಗಳೇ.


ಪರಸ್ಪರ ವಿರೋಧಿ ಶಕ್ತಿಗಳೂ, ಅವುಗಳೊಳಗಿನ ತಿಕ್ಕಾಟಗಳೂ ಇದ್ದರೆ, ಅವು ಇರುವ ಸಮಾಜ ವ್ಯವಸ್ಥೆ ಸಮಾಜವಾದಿಯಲ್ಲ ಎಂಬ ಅನಿಸಿಕೆ ಎರಡನೇ ಪ್ರಶ್ನೆಕಾರನಿಗಿದೆ. ಒಂದೇ ಭೂಖಂಡದಲ್ಲಿ ಕೆಲವಾರು ಸಮಾಜವಾದಿ ದೇಶಗಳೂ, ಉಳಿದವು ಬಂಡವಾಳಶಾಹೀ ರಾಷ್ಟ್ರಗಳೂ ಆಗಿರುವಾಗ ಸಮಾಜವಾದದ ಪ್ರಭಾವ ಬಂಡವಾಳಶಾಹಿಯ ಮೇಲೂ, ಬಂಡವಾಳ ಶಾಹಿಯ ಪ್ರಭಾವ ಸಮಾಜವಾದೀ ದೇಶಗಳ ಮೇಲೂ ಉಂಟಾಗುವುದು ಸ್ವಾಭಾವಿಕವಷ್ಟೆ. ಬಂಡವಾಳಶಾಹೀ ದೇಶಗಳಲ್ಲಿ ಸಮಾಜವಾದದೆಡೆಗೂ, ಸಮಾಜವಾದೀ ದೇಶಗಳಲ್ಲಿ ಬಂಡವಾಳಶಾಹೀ ಪದ್ಧತಿಯೆಡೆ ಹಿನ್ನಡೆಯ ಪ್ರವೃತ್ತಿ ಕಾಣಬರುತ್ತದೆ. ಅವುಗಳೊಳಗೆ ತಿಕ್ಕಾಟ ನಡೆಯುತ್ತದೆ. ಆ ತಿಕ್ಕಾಟಗಳಲ್ಲಿ ಅಂತಿಮ ಜಯ ಪಡೆಯುವುದು ಸಮಾಜವಾದವೇ. ತಾತ್ಕಾಲಿಕವಾಗಿ ಸಮಾಜವಾದದಿಂದ ಹಿಂದರಿದ ದೇಶಗಳು ಪುನಃ ಸಮಾಜವಾದದೆಡೆಗೆ ಮರಳುತ್ತವೆ. ಹಾಗೆ ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಉಳಿದಿರುವ ದೇಶಗಳೂ ಸಮಾಜದದೆಡೆಗೂ ಸರಿಯುತ್ತದೆ.

ಸಂಗ್ರಹ: ಲತೀಫ್.

ಪ್ರತಿಭಟನಾ ಶ್ರಮದಾನ

ತಾ. 10.6.1990ರಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕುಪ್ಪೆಪದವು ಶಾಖೆಯ ಕಾರ್ಯಕರ್ತರಿಂದ ಕುಪ್ಪೆಪದವಿನಿಂದ ಎಡಪದವು ತನಕ 5 ಕಿ.ಮೀ. ಡಾಮರು ರಸ್ತೆ ದುರಸ್ಥಿಯನ್ನು ಮಾಡಲಾಯಿತು. ಹಲವಾರು ಬಾರಿ ಸಿ.ಪಿ.ಐ.(ಎಂ) ವತಿಯಿಂದ ಹಾಗೂ ಇತರ ಸಾಮೂಹಿಕ ಸಂಘಟನೆಗಳಿಂದ ಈ ರಸ್ತೆ ದುರಸ್ಥಿಗಾಗಿ ಜಿಲ್ಲಾ ಪರಿಷತ್ ಹಾಗೂ ಸಂಬಂಧಪಟ್ಟವರಿಗೆ ಮನವಿ ಅರ್ಪಿಸಿದರೂ ಕಿವಿಗೊಡದಿದ್ದುದರ ಪ್ರತಿಭಟನಾ ಅಂಗವಾಗಿ ಈ ಶ್ರಮದಾನ ಮಾಡಲಾಯಿತು.

ಇನ್ನಾದರೂ ಈ ರಸ್ತೆ ದುರಸ್ಥಿಗೆ ಗಮನ ಕೊಡದೇ ಹೋದಲ್ಲಿ ರಸ್ತೆ ತಡೆ ನಡೆಸಿ ವಾಹನ ಸಂಚಾರಕ್ಕೆ ತಡೆ ಒಡ್ಡಿ ಸಾಮೂಹಿಕ ಬಂಧನದ ಹೋರಾಟ ನಡೆಸಲಾಗುವುದೆಂದು ಕುಪ್ಪೆಪದವು ಶಾಖೆಯ ಕಾರ್ಯದರ್ಶಿ ಸದಾಶಿವದಾಸ್ ತಿಳಿಸಿದ್ದಾರೆ.



ನಿರುದ್ಯೋಗ ದರ %

ವಯೋಗುಂಪು	ಗ್ರಾಮೀಣ	ನಗರ	ಒಟ್ಟು
15-29	4.54	13.39	6.54
30-44	0.66	1.55	0.86
45-59	0.40	1.03	0.53
ಎಲ್ಲಾ ವಯಸ್ಸಿನವರು	2.15	6.35	3.04

(ಕೃಪೆ: ಇಕನಾಮಿಕ್ ಟೈಮ್ಸ್, ಜುಲೈ 1)

Printed and Published by P. Ramachandra Rao. on behalf of Communist Party of India (Marxist) Karnataka State Committee, L-56, K.V. T...
- 560 053; Editor: P. RAMACHANDRA RAO